

# ಮಕ್ಕಳ ಸಂರಕ್ಷಣಾ ಯೋಜನೆ

**ರಾಯಚೂರು – 2009–2012**

---

## ಮಕ್ಕಳಿಗೆ ಸುರಕ್ಷಿತ ವಾತಾವರಣ ನೀಡುವತ್ತ ರಾಯಚೂರು ಜಿಲ್ಲೆ.

unicef


# ಮಕ್ಕಳ ಸಂರಕ್ಷಣಾ ಯೋಜನೆ

**ರಾಯಚೂರು ಜಿಲ್ಲೆ – 2009–2012**

## ಯೋಜನೆಯ ಕಿರು ಪರಿಚಯದ ಕೈಪಿಡಿ


ತಯಾರಿ ಹಾಗೂ ಪ್ರಕಟಣೆ :

**ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್, ಹೈದರಾಬಾದ್.**



A hand book on "District Child Protection Plan 2009-2012"
for Raichur District Developed by
Government of Karnataka and Unicef, Hyderabad.


| | | |
|---|---|---|
| ಪ್ರತಿ | : | 1000 |
| ಪುಟ | : | 48 |
| ಮೊದಲ ಆವೃತ್ತಿ | : | ಡಿಸೆಂಬರ್, 2009 |
| ಹಕ್ಕುಗಳು | : | ಕಾಯ್ದಿರಿಸಲಾಗಿದೆ. ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್, ಹೈದರಾಬಾದ್ |
| ಅನುಷ್ಠಾನ ಸಂಯೋಜನೆ | : | ರಾಜ್ಯ ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ. |
| ಅನುಷ್ಠಾನ | : | ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ ರಾಯಚೂರು ಮತ್ತು ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆಯ ಕಾರ್ಯಕಾರಿ ಸಮಿತಿ (ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳನ್ನೊಳಗೊಂಡ 35 ಸದಸ್ಯರು), ರಾಯಚೂರು. |
| ಯೋಜನೆಯ ಅಧ್ಯಕ್ಷರು | : | ಜಿಲ್ಲಾಧಿಕಾರಿಗಳು, ರಾಯಚೂರು. ಫೋ : 08532–229011 |
| ರೇಖಾಚಿತ್ರ | : | ಗೋಪಾಡ್ಕರ್ |
| ಸಂಯೋಜನೆ ಮತ್ತು ವಿನ್ಯಾಸ | : | ಕೆ. ರಾಘವೇಂದ್ರ ಭಟ್ |
| ಪ್ರಕಟಣೆ | : | ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ,<br>ಜಿಲ್ಲಾಧಿಕಾರಿಗಳ ಕಛೇರಿ, ಸಾಥ್ ಕಛೇರಿ,<br>ರಾಯಚೂರು – 584 101. ಫೋ. : 08532–230610<br>E-mail : unicefdcdppr@gmail.com<br>ಯುನಿಸೆಫ್ ಹೈದರಾಬಾದ್,<br>ನಂ. 3–6–15/2, ಎಂಎಸ್ ನಂ. 865, ರೋಡ್ ನಂ. 19,<br>ಹಿಮಾಯತ್ ನಗರ, ಹೈದರಾಬಾದ್ – 500 029.<br>ಫೋ. : 040–23227226, 23227236 |
| ಡಿ.ಟಿ.ಪಿ. | : | ಗ್ಯಾಲಕ್ಸಿ ಗ್ರಾಫಿಕ್ಸ್, ಫೋ : 08192–235495 |
| ಮುದ್ರಣ | : | |




**United Nations Children's Fund**
H. No. 3-6-15/2, M. No. 865
Street No. 19, Himayathnagar,
Hyderabad - 500 029.

Telephone : 23227226 / 23227236
: 23227328 / 23227335
: 23225832 / 23225864
Fax : 23227207
Cable : UNICEF Hyderabad
Website : www.unicef.org

## ಮುನ್ನುಡಿ

ರಾಯಚೂರು ಡಿಪಿಪಿಗೆ ಮುನ್ನುಡಿ ಬರೆಯಲು ನನಗೆ ತುಂಬಾ ಸಂತೋಷವೆನಿಸುತ್ತದೆ. ಕರ್ನಾಟಕ ಸರ್ಕಾರ ಮತ್ತು ನಾಗರಿಕ ಸಮಾಜವವು ಮಕ್ಕಳಿಗಾಗಿ ಬಂಡವಾಳ ಹೂಡುವುದರ ಪ್ರಾಮುಖ್ಯತೆಗೆ ಇದು ಒಂದು ಉತ್ತಮ ಉದಹರಣೆ. ಮಾನವಾಭಿವೃದ್ಧಿ ಕುರಿತು ಸಾರ್ವತ್ರಿಕ ಸಂವಾದಗಳಲ್ಲಿ ಮಕ್ಕಳು ಈಗ ಹೆಚ್ಚು ಪ್ರಮುಖರಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಜನಜೀವನದ ಗುಣಮಟ್ಟ ಹೆಚ್ಚಿಸಲು ಮತ್ತು ಸಮಗ್ರ ಅಭಿವೃದ್ಧಿ ತ್ವರಿತಗೊಳಿಸಲು ಮಕ್ಕಳ ಹಕ್ಕುಗಳನ್ನು ಕಾಪಾಡಬೇಕೆಂಬುವ ವಿಚಾರಕ್ಕೆ ಹೆಚ್ಚಿನ ಅಂಗೀಕಾರ ಮತ್ತು ಪ್ರಮುಖ ಸ್ಥಾನ ಲಭಿಸುತ್ತದೆ.

ಇದರ ಮೊದಲೆನೆಯ ಹೆಜ್ಜೆಯಾಗಿ, 0–18 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಅನ್ವಯವಾಗುವಂತಹ 'ಜಿಲ್ಲಾ ಸಂರಕ್ಷಣಾ ಘಟಕ' ಜಾರಿಗೊಳಿಸಲು ಕರ್ನಾಟಕ ಸರ್ಕಾರವು ಮುಂದಾಗಿರುವುದನ್ನು ನಾನು ಅಭಿನಂದಿಸುತ್ತೇನೆ.

ರಾಯಚೂರಿನಲ್ಲಿ ಮಕ್ಕಳಿಗೆ ಅವರ ಹಕ್ಕುಗಳನ್ನು ಖಾತ್ರಿಪಡಿಸುವುದರಲ್ಲಿ ಅನೇಕ ಸವಾಲುಗಳಿವೆ ಈ ಹಂತದಲ್ಲಿ ಕಲಿಕೆಯ ಸಾದ್ಯತೆಗಳು ಕೂಡಾ ಹೆಚ್ಚು. ಆದುದರಿಂದ ರಾಯಚೂರಿನ ಪ್ರತಿಯೊಬ್ಬ ವ್ಯಕ್ತಿಯೂ ಈ ಸಂಕಲ್ಪದ ಭಾಗವಾಗಿದ್ದು, ಜಿಲ್ಲೆಯ ಪ್ರತಿಯೊಂದು ಮಗುವೂ ಸುರಕ್ಷಿತವಾಗಿರಲು ಬದ್ಧತೆ ತೋರುವುದು ಅಗತ್ಯವಾಗಿದೆ.

ಮಕ್ಕಳಿಗೆ ಮಾರಕವಾದ ಸಾಮಾಜಿಕ ರೀತಿಗಳು ಮತ್ತು ರೂಡಿಗಳನ್ನು ಪುನಃಪರಿಶೀಲಿಸುವುದು ಹಾಗೂ ಹೆಣ್ಣುಮಕ್ಕಳು, ಅಲ್ಪಸಂಖ್ಯಾತರು ಮತ್ತು ಸಮಾಜದಿಂದ ದೂಡಲ್ಪಟ್ಟ ಸಮುದಾಯಗಳು ಸೇರಿದಂತೆ ಎಲ್ಲ ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸಿ ಪ್ರೋತ್ಸಾಹಿಸುವುದು ಮಕ್ಕಳ ರಕ್ಷಣಾ ವಿಚಾರಗಳಿಗೆ ಸೇರುತ್ತವೆ.

ಆರೋಗ್ಯ, ಪೌಷ್ಠಿಕತೆ ಮತ್ತು ಶಿಕ್ಷಣ ಸೂಚಕಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸೇವಾ ಲಭ್ಯತೆ ವ್ಯವಸ್ಥೆಯೊಂದಿಗೆ ರಾಯಚೂರು ಜಿಲ್ಲೆಯು ಈಗಾಗಲೇ ಸಮುದಾಯ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ.

ಮಕ್ಕಳ ಸಂರಕ್ಷಣಾ ಯೋಜನೆಯು ಬಾಲಕಾರ್ಮಿಕ ಪದ್ಧತಿ, ವಿಶೇಷ ಸಾಮರ್ಥ್ಯವುಳ್ಳ ಮಕ್ಕಳು, ಬಾಲ್ಯವಿವಾಹ, ಶಾಲೆ ಮತ್ತು ಕುಟುಂಬಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ಹಿಂಸೆ ಮುಂತಾದ ವಿಚಾರಗಳ ಬಗೆಗಿರುವ ಮನೋಭಾವಗಳು ಮತ್ತು ಸಾಮಾಜಿಕ ಮಾನದಂಡಗಳನ್ನು ಬದಲಾಯಿಸಲು ಪ್ರಯತ್ನಿಸುವುದು ಮತ್ತು ಅನಾಥರು, ಬೀದಿ ಮಕ್ಕಳು ಮತ್ತು ಏಡ್ಸ್‌ನಿಂದ ಬಳಲುವ ಮಕ್ಕಳಿಗೆ ಸಂರಕ್ಷಣಾ ವ್ಯವಸ್ಥೆಗಳನ್ನು ಪ್ರೋತ್ಸಾಹಿಸುವುದರೊಂದಿಗೆ ಸೇವಾ ಕ್ಷೇತ್ರಗಳಿಗೆ ಸಂಪರ್ಕ ಹೊಂದಿಸಲು ಗುರಿಯಿಟ್ಟಿದೆ.

ನಾವು ಅಂದುಕೊಂಡಿದ್ದನ್ನು ಸಾಧಿಸುವುದು ಅಷ್ಟೇನು ಸುಲಭವಲ್ಲ. ಇದೊಂದು ಸೊಡ್ಡ ಸವಾಲು ಮತ್ತು ಈ ಗುರಿ ಮುಟ್ಟಲು ಎಲ್ಲರ ಬದ್ಧತೆಯ ಅಗತ್ಯವಿದೆ. ರಾಜಕೀಯ ಇಚ್ಛಾಶಕ್ತಿ, ಆಡಳಿತ ಬೆಂಬಲ ಮತ್ತು ಸಮುದಾಯ ಕಾರ್ಯಕ್ರಮಗಳು ಇದ್ದಲ್ಲಿ ಎಲ್ಲ ಮಕ್ಕಳನ್ನು ಪೋಷಿಸಿ ರಕ್ಷಿಸುವ ಜಾಗರೂಕ, ಕ್ರಿಯಾಶೀಲ, ಮಕ್ಕಳ ಸ್ನೇಹಿ ಜನಸಮುದಾಯಗಳನ್ನು ಸೃಷ್ಟಿಸುವ ಬದಲಾವಣೆಯೊಂದನ್ನು ನಾವೆಲ್ಲರೂ ಸೇರಿ ಮಾಡಬಹುದೆಂಬುದು ನನ್ನ ನಂಬಿಕೆ.

ಮಿಷೆಲ್ ಸೈಂಟ್ ಲಾಟ್
ಆಂಧ್ರಪ್ರದೇಶ ಮತ್ತು ಕರ್ನಾಟಕದ ಯುನಿಸೆಫ್ ಪ್ರತಿನಿಧಿ

For every child
Health Education, Equality, Protection
ADVANCE HUMANITY

unicef

"ಕನ್ನಡ ಅನುಷ್ಠಾನ ವರ್ಷ–೨೦೦೯"

**ರಮೇಶ್ ಬಿ. ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ದೂರವಾಣಿ : 22254894
22035004
ಫ್ಯಾಕ್ಸ್ : 22256368
ಕರ್ನಾಟಕ ಸರ್ಕಾರದ ಸಚಿವಾಲಯ

## ಆಶಯ ನುಡಿ

ಮಕ್ಕಳ ರಕ್ಷಣೆ ಒಂದು ರಾಷ್ಟ್ರದ, ರಾಜ್ಯದ, ಗ್ರಾಮದ ಜವಾಬ್ದಾರಿ, ಮಕ್ಕಳ ಸಂರಕ್ಷಣೆ ಎಂದಾಕ್ಷಣ ಒಂದು ಮಗುವಿನ ಸಾರ್ವತ್ರಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ಕರ್ನಾಟಕ ಸರ್ಕಾರವು ಮಕ್ಕಳ ಸಂರಕ್ಷಣೆಯನ್ನು ಪ್ರಾಥಮಿಕ ಕಾರ್ಯಸೂಚಿಯನ್ನಾಗಿ ಮಾಡಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೊಲೀಸ್ ಇಲಾಖೆ ಮತ್ತು ಯುನಿಸೆಫ್ ಒಟ್ಟಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ಬಾಲಕಾರ್ಮಿಕ ಪದ್ಧತಿ, ಮಕ್ಕಳ ರಕ್ಷಣೆ, ಮಕ್ಕಳ ನ್ಯಾಯ ಕಾಯ್ದೆ ಮುಂತಾದ ವಿಚಾರದಲ್ಲಿ ಯಶಸ್ವಿಯಾಗಿ ವಿಶೇಷ ಯೋಜನೆಗಳನ್ನು ಅನುಷ್ಠಾನ ಮಾಡಿ ಕಾರ್ಯನಿರ್ವಹಿಸುತ್ತಿದೆ.

ಇದೀಗ "ಮಕ್ಕಳ ಸಂರಕ್ಷಣೆ" ಎಂಬ ವಿಶೇಷ ಮಾದರಿ ಯೋಜನೆಯೊಂದನ್ನು ರಾಯಚೂರು ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್ ಒಪ್ಪಂದದ ಆಧಾರದ ಮೇಲೆ ಅನುಷ್ಠಾನ ಪ್ರಾರಂಭಿಸಲಾಗಿದೆ. ಈ ಯೋಜನೆಯ ಪರಿಚಯವೇ ಈ ಕೈಪಿಡಿ.

ಈ ಕೈಪಿಡಿಯಲ್ಲಿ ತಿಳಿಸಿರುವಂತೆ ಈ ಯೋಜನೆಯನ್ನು ಎಲ್ಲಾ ಇಲಾಖೆಗಳು, ಜನಪ್ರತಿನಿಧಿಗಳು, ಸಮುದಾಯಗಳ ಸಹಭಾಗಿತ್ವದೊಂದಿಗೆ ಜಾರಿ ಮಾಡಿ ಯಶಸ್ವಿ ಮಾಡುವ ಹೊಣೆ ನಮ್ಮೆಲ್ಲರ ಮೇಲಿದೆ. ಇದೊಂದು ಮಾದರಿ ಯೋಜನೆ. ಇದರಲ್ಲಿ ಮುಖ್ಯವಾಗಿ ರಾಯಚೂರು ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯೇ ಇದರ ಮುಖ್ಯ ಗುರಿ ಅದರೊಂದಿಗೆ ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟದ ತಡೆ ಮತ್ತು ನಿರ್ಮೂಲನೆ ಕೂಡ ಯೋಜನೆಯ ಉದ್ದೇಶಗಳು.

2012ರ ವೇಳೆಗೆ ಬಾಲಕಾರ್ಮಿಕ ಮುಕ್ತ ಹಾಗೂ ಮಕ್ಕಳಿಗೆ ಸುರಕ್ಷಿತ ಜಿಲ್ಲೆಯೆಂದು ಸಾರುವ ಹಂತಕ್ಕೆ ನಾವು ಈ ಯೋಜನೆಯನ್ನು ಅನುಷ್ಠಾನ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಯ ಗುರಿ, ಉದ್ದೇಶ, ಕರ್ತವ್ಯ, ಪರಿಣಾಮ ಮತ್ತು ಇಲಾಖೆಗಳ ಪಾತ್ರದ ಬಗ್ಗೆ ಸ್ಪಷ್ಟವಾಗಿ ಈ ಕೈಪಿಡಿ ತಿಳಿಸುತ್ತದೆ. ಅದರಂತೆ ರಾಯಚೂರು ಜಿಲ್ಲೆಯ ಪ್ರತಿಯೊಂದು ಇಲಾಖಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಸಂಯೋಜಿತ ರೀತಿಯಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡುವ ಮೂಲಕ ಕರ್ನಾಟಕದಲ್ಲಿಯೇ ರಾಯಚೂರು ಮಕ್ಕಳ ಸಂರಕ್ಷಣೆ ಕ್ಷೇತ್ರದಲ್ಲಿ ಮಾದರಿಯಾಗಲಿ ಎಂದು ಆಶಿಸುತ್ತೇನೆ.

**ರಮೇಶ್ ಬಿ. ಝುಳಕಿ,** ಭಾ.ಆ.ಸೇ.

ನಂ. 414, 4ನೇ ಮಹಡಿ, ವಿಕಾಸಸೌಧ, ಡಾ॥ ಅಂಬೇಡ್ಕರ್ ರಸ್ತೆ, ಬೆಂಗಳೂರು – 560 001.

"ಕನ್ನಡ ಅನುಷ್ಠಾನ ವರ್ಷ-೨೦೦೯"

ಡಾ॥ ರ. ಗೋ. ನಡಾದೂರ
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ದೂರವಾಣಿ : ಕಛೇರಿ : 22257334
ಫ್ಯಾಕ್ಸ್ : 22385545
ಕೊಠಡಿ ಸಂಖ್ಯೆ : 641, 6ನೇ ಮಹಡಿ,
ಬಹುಮಹಡಿಗಳ ಕಟ್ಟಡ, ಗೇಟ್ 2,
ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು - 560 001.
E-mail : prsprim-edu@karnataka.gov.in

## ಶುಭಾಶಯ ನುಡಿ

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಸಂರಕ್ಷಣೆ ಯೋಜನೆಯನ್ನು ರಾಯಚೂರು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಇದರ ಉದ್ದೇಶವೇನೆಂದರೆ ಮಕ್ಕಳು ಯಾವುದೇ ಕಾರಣಕ್ಕೂ ಬಡತನಕ್ಕೆ, ಬಾಲಕಾರ್ಮಿಕತೆಗೆ ಅಥವಾ ದೌರ್ಜನ್ಯಕ್ಕೆ ಒಳಗಾಗಬಾರದು. ಜೊತೆಗೆ ಅವರುಗಳಿಗೆ ಕಡ್ಡಾಯವಾಗಿ ಶಿಕ್ಷಣ ಸಿಗಬೇಕು.

ಮಕ್ಕಳು ಕೊನೆಯ ಪಕ್ಷ 10ನೇ ತರಗತಿಯವರೆಗೆ ಶಾಲೆಯಲ್ಲಿ ಇದ್ದು ಶಿಕ್ಷಣ ಮುಂದುವರೆಸಬೇಕು. ಇದೇ ಈ ಯೋಜನೆಯ ಮುಖ್ಯ ಗುರಿ. ಸದ್ಯಕ್ಕೆ ಈ ಯೋಜನೆಯು ರಾಯಚೂರು ಜಿಲ್ಲೆಗೆ ಮಾತ್ರ ಸೀಮಿತವಾಗಿದೆ. ಬರುವ ವರ್ಷಗಳಲ್ಲಿ ಈ ಯೋಜನೆಯು ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು ಎಂದು ಆಶಿಸುತ್ತೇನೆ.

ಈ ಯೋಜನೆಯು ಅತ್ಯಂತ ಯಶಸ್ವಿಯಾಗಿ ಅನುಷ್ಠಾನವಾಗಲಿ ಹಾಗೂ ಇಂದಿನ ಚಿಕ್ಕಪುಟ್ಟ ಮಕ್ಕಳು ನಾಳಿನ ವಿದ್ಯಾವಂತ ಹಾಗೂ ಸಮರ್ಥ ನಾಗರೀಕರಾಗಿ ಬಾಳಲಿ ಎಂದು ಹಾರೈಸುತ್ತೇನೆ.

(ಡಾ॥ ರ. ಗೋ. ನಡಾದೂರ)

"ಕನ್ನಡ ಅನುಷ್ಠಾನ ವರ್ಷ-೨೦೦೯"

**ಡಾ|| ಡಿ. ಎಸ್. ಅಶ್ವಥ್,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ದೂರವಾಣಿ : ಕಛೇರಿ : 22353991
ಫ್ಯಾಕ್ಸ್ : 22251011
E-mail : secy-wc@karnataka.gov.in
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 1ನೇ ಮಹಡಿ,
ಕೊಠಡಿ ಸಂಖ್ಯೆ 110, ಗೇಟ್-3,
ಬೆಂಗಳೂರು - 560 001.

## ಶುಭಾಶಯ ನುಡಿ

ಮಕ್ಕಳು ಸ್ವತಂತ್ರವಾಗಿ ಸಂತೋಷದಿಂದ ಬದುಕುತ್ತಿದ್ದರೆ ಮಾತ್ರ ರಾಷ್ಟ್ರ ಅಭಿವೃದ್ಧಿಯಾಗಲು ಸಾಧ್ಯ ಅಥವಾ ಅಭಿವೃದ್ಧಿ ಪಥದಲ್ಲಿದೆ ಎಂದು ಹೇಳಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಮತ್ತು ನಮ್ಮ ಇಲಾಖೆ ಹಲವಾರು ಯೋಜನೆ, ಕಾರ್ಯತಂತ್ರಗಳನ್ನು ಅಳವಡಿಸಿ, ಅನುಷ್ಠಾನ ಮಾಡುತ್ತಿದೆ. ಮುಖ್ಯವಾಗಿ ಬಾಲ ನ್ಯಾಯ ಕಾಯ್ದೆ, ಬಾಲ್ಯವಿವಾಹ ನಿರ್ಮೂಲನಾ ಕಾಯ್ದೆ, ಬಾಲ ವಿಕಾಸ ಅಕಾಡೆಮಿ, ಪಂಚಾಯಿತಿ ಮಟ್ಟದಲ್ಲಿ ಮಹಿಳೆಯುರ, ಮಕ್ಕಳ ಮಾರಾಟ ಮತ್ತು ಸಾಗಾಣಿಕೆ ನಿರ್ಮೂಲನಾ ಸಮಿತಿ ಮುಂತಾದ ವಿಭಿನ್ನ ಮಹತ್ತರ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದೆ.

ಆದರೂ ಮಕ್ಕಳ ಮೇಲೆ ನಿರಂತರ ಶೋಷಣೆ, ದೌರ್ಜನ್ಯ ಹಾಗೂ ವಿವಿಧ ರೀತಿಯ ಹಿಂಸೆ ಸಮಾಜದಲ್ಲಿ ಕಾಣುತ್ತಲೇ ಇದೆ. ಹಾಗೂ ಬೀದಿ ಮಕ್ಕಳು, ವಿಶೇಷ ಮಕ್ಕಳು, ಬಾಲ ಕಾರ್ಮಿಕತೆ, ಮಕ್ಕಳ ಹಕ್ಕುಗಳ ಉಲ್ಲಂಘನೆಗಳು ಸಮಾಜದ ಇನ್ನೊಂದು ಕ್ರೂರ ಮುಖವನ್ನು ತೋರಿಸುತ್ತದೆ.

ಈ ಎಲ್ಲಾ ಸಾಮಾಜಿಕ ಸಮಸ್ಯೆಯ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ "ಮಕ್ಕಳ ಸಂರಕ್ಷಣೆ ಯೋಜನೆ"ಯನ್ನು ಕರ್ನಾಟಕ ಸರ್ಕಾರ ಮತ್ತು ಯುನಿಸೆಫ್ ಸಹಯೋಗದಲ್ಲಿ ಯೋಜಿಸಲಾಗಿದೆ.

ಈ ಯೋಜನೆಯಡಿಯಲ್ಲಿ ಮಕ್ಕಳ ಆರೋಗ್ಯ, ಪೌಷ್ಠಿಕತೆ, ಶಿಕ್ಷಣ, ರಕ್ಷಣೆ ಮತ್ತು ಹೆಚ್.ಐ.ವಿ. ಕುರಿತಂತೆ ಸುರಕ್ಷಿತವಾಗಿ ಮಕ್ಕಳು ಬದುಕುವ ವಾತಾವರಣ ಜಿಲ್ಲೆಯಲ್ಲಿ ಆಗಬೇಕೆಂಬುದು ಆಶಯ. ಮಕ್ಕಳೆಲ್ಲರೂ ಎಲ್ಲಾ ಸಮಸ್ಯೆಗಳಿಂದ ದೂರ ಇದ್ದು, ಎಲ್ಲಾ ಸೌಲಭ್ಯಗಳೊಂದಿಗೆ ಶಿಕ್ಷಣ ವ್ಯವಸ್ಥೆಯ ಮುಖ್ಯವಾಹಿನಿಯಲ್ಲಿರಬೇಕೆಂಬುದು ಈ ಯೋಜನೆಯ ಮತ್ತೊಂದು ಗುರಿ.

ಈ ಗುರಿ ಮುಟ್ಟುವಲ್ಲಿ ಎಲ್ಲಾ ಇಲಾಖೆ, ಜನಪ್ರತಿನಿಧಿಗಳು, ಸಮುದಾಯ ಸಂಘ ಸಂಸ್ಥೆಗಳು ಒಟ್ಟಾಗಿ ಕಾರ್ಯನಿರ್ವಹಿಸಿ ಯೋಜನೆಯನ್ನು ಯಶಸ್ವಿಗೊಳಿಸಿ ರಾಜ್ಯಕ್ಕೆ ನೀಡೋಣ ಎಂಬುದು ನನ್ನ ಆಶಯ.

**(ಡಾ|| ಡಿ. ಎಸ್. ಅಶ್ವಥ್)**
ಸರ್ಕಾರದ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

**ಎಸ್. ಟಿ. ರಮೇಶ್,** ಭಾ.ಪೊ.ಸೇ.
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ನೇಮಕಾತಿ ಮತ್ತು ತರಬೇತಿ

ಕಾರ್ಲ್‌ಟನ್ ಭವನ, ಅರಮನೆ ರಸ್ತೆ,
ಬೆಂಗಳೂರು – 560 001.
ದೂರವಾಣಿ : ಕಛೇರಿ : 22264311,
22942231
ಮನೆ : 26488233, 22942238
ಫ್ಯಾಕ್ಸ್ : 22208122

---

## ಶುಭಾಶಯ ನುಡಿ

ಕಾನೂನು ಜಾರಿಗೊಳಿಸುವ ಸಂದರ್ಭಗಳಲ್ಲಿ ಪೊಲೀಸರು ಮಕ್ಕಳೊಂದಿಗೆ ಕೆಲಸ ಮಾಡುವುದು ಅನಿವಾರ್ಯ. 18 ವರ್ಷದೊಳಗಿನ ಮಕ್ಕಳು ತಪ್ಪು ಮಾಡಿರಬಹುದಾದರೂ ಅವರನ್ನು ವಯಸ್ಕರ ದೃಷ್ಟಿಯಲ್ಲಿ ನೋಡುವುದು ಸಲ್ಲ. 18 ವರ್ಷದೊಳಗಿನವರಿಗೆ ಅವರು ಮಾಡಿದ ತಪ್ಪಿನ ಪರಿಣಾಮಗಳ ಕುರಿತು ಅರಿವಿರುವುದಿಲ್ಲ. ಶೋಷಣೆ, ಕುಟುಂಬದಲ್ಲಿ ಒಡಕು, ಪೋಷಣೆ ಮತ್ತು ರಕ್ಷಣೆಯ ಕೊರತೆ ಮುಂತಾದ ಕಾರಣಗಳಿಂದಾಗಿ ಇವರು ತಪ್ಪಿನ ಕಡೆಗೆ ಕೆಲವೊಮ್ಮೆ ವಾಲುತ್ತಾರೆ. ಸಮಾಜ ಇಂತಹ ಕೃತ್ಯಗಳಿಗೆ ಅವರನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಮಕ್ಕಳ ನ್ಯಾಯ ಕಾಯ್ದೆ ನಮ್ಮ ದೇಶದಲ್ಲಿ ಜಾರಿಗೆ ಬಂದು ಈಗ ಸುಮಾರು ಒಂದು ದಶಕವಾಗಿದೆ. ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳು ಮತ್ತು ಪೋಷಣೆ ಮತ್ತು ರಕ್ಷಣೆ ಇಲ್ಲದ ಮಕ್ಕಳ ಸ್ಥಿತಿಗತಿಯನ್ನು ಪೂರ್ಣ ಪ್ರಮಾಣದಲ್ಲಿ ಅರ್ಥಮಾಡಿಕೊಳ್ಳಲು ಮತ್ತು ಕಾನೂನನ್ನು ಅಕ್ಷರಶಃ ಜಾರಿ ಮಾಡಲು ಮಕ್ಕಳ ನ್ಯಾಯ ಕಾಯ್ದೆ ಮತ್ತು ನಿಯಮಗಳಲ್ಲಿರುವ ಅಂಶಗಳ ಕುರಿತು ಪೊಲೀಸರ ನಡುವೆ ಅರಿವು ಮೂಡಿಸುವುದು ಅಗತ್ಯವಾಗಿದೆ.


ಯುನಿಸೆಫ್ ಮತ್ತಿತರ ಸ್ವಯಂಸೇವಾ ಸಂಸ್ಥೆಗಳ ನೆರವಿನಿಂದ ಪೊಲೀಸರಿಗಾಗಿ ನಡೆಯುತ್ತಿರುವ ಲಿಂಗ ಸಂವೇದನಾ ತರಬೇತಿ ಕಾರ್ಯಕ್ರಮದಡಿಯಲ್ಲಿ ಪೊಲೀಸರಿಗೆ ಮಕ್ಕಳ ನ್ಯಾಯ ಕಾಯ್ದೆ ಮತ್ತು ನಿಯಮಗಳ ಕುರಿತು ತರಬೇತಿ ದೊರೆಯುತ್ತಿದೆ. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ನೇಮಕಾತಿ ಮತ್ತು ತರಬೇತಿ) ರಾಜ್ಯಮಟ್ಟದ ನೋಡಲ್ ಅಧಿಕಾರಿಯಾಗಿದ್ದು, ಪ್ರತಿಯೊಬ್ಬ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಡಿಸಿಪಿ ಮತ್ತು ಒಬ್ಬ ಪೊಲೀಸ್ ಅಧಿಕಾರಿಯನ್ನು ಜಿಲ್ಲಾ ನೋಡಲ್ ಅಧಿಕಾರಿಯನ್ನಾಗಿ ನೇಮಿಸುತ್ತಾರೆ. ಕಾಯ್ದೆಯ ಪ್ರಕಾರ ಒಂದು ಪೊಲೀಸ್ ಠಾಣೆಯನ್ನು ವಿಶೇಷ ಮಕ್ಕಳ ಪೊಲೀಸ್ ಘಟಕವನ್ನಾಗಿ ಘೋಷಣೆ ಮಾಡಲಾಗುತ್ತದೆ ಮತ್ತು ಪ್ರತಿ ಪೊಲೀಸ್ ಠಾಣೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿಯನ್ನು **ಮಕ್ಕಳ ಕಲ್ಯಾಣ ಅಧಿಕಾರಿ**ಯನ್ನಾಗಿ ನೇಮಿಸಲಾಗುತ್ತದೆ. ರಾಜ್ಯ ಮಟ್ಟದಿಂದ ಪೊಲೀಸ್ ಠಾಣೆಯವರೆಗಿನ ಈ ಶ್ರೇಣೀಕೃತ ವ್ಯವಸ್ಥೆಯು ಮಕ್ಕಳ ಹಕ್ಕುಗಳು ಜಾರಿಯಾಗುವಂತೆ ಖಾತರಿಪಡಿಸಬೇಕು.

ಕಾನೂನಿನೊಡನೆ ಸಂಘರ್ಷಕ್ಕೊಳಗಾದ ಮಕ್ಕಳು ಹಾಗೂ ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳು ವಿವಿಧ ಇಲಾಖೆಗಳು ಮತ್ತು ಸಮಾಜದ ಸಂಪರ್ಕದಲ್ಲಿ ಬರುತ್ತಾರಾದರೂ, ಪೊಲೀಸ್ ಇಲಾಖೆಗೆ ಇದರಲ್ಲಿ ವಿಶೇಷ ಪಾತ್ರ ಇದೆ. ಕಾನೂನು ಜಾರಿ

ಮಾಡುವಾಗ ಈ ಬಗೆಯ ಮಕ್ಕಳ ಬಗ್ಗೆ ಅವರು ಸೂಕ್ಷ್ಮ ಸಂವೇದಿಗಳಾಗಿರಬೇಕು. ಏಕೆಂದರೆ, ಮಕ್ಕಳ ಬದುಕುವ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮಾನವ ಹಕ್ಕುಗಳು ಇದರಲ್ಲಿ ಒಳಗೊಂಡಿರುತ್ತದೆ. ಮಕ್ಕಳ ನ್ಯಾಯ ಕಾಯ್ದೆಯ ಪ್ರಕಾರ ಮತ್ತು ಬಹಳ ಸೂಕ್ಷ್ಮವಾಗಿ ಈ ಮಕ್ಕಳಿಗೆ ಸಂಬಂಧಿಸಿದ ಸಂಗತಿಗಳನ್ನು ನಿಭಾಯಿಸದಿದ್ದರೆ ಅವರನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುವುದಿಲ್ಲ. ಹಾಗಾಗದಿದಾಗ, ಕಾನೂನು ಜಾರಿ ಮತ್ತು ಅಪರಾಧಿಗಳ ಮನಪರಿವರ್ತನೆ ಎಂಬ ಪರಿಕಲ್ಪನೆಗಳಿಗೆ ಬದ್ಧವಾಗಿರುವ ಪ್ರಗತಿಪರ ಮತ್ತು ಸುಸಂಸ್ಕೃತ ಸಮಾಜ ನಮ್ಮದು ಎಂಬ ವಾದ ಹುಸಿಯಾಗುತ್ತದೆ.

ಆದ್ದರಿಂದ ರಾಯಚೂರಿನ ಮಕ್ಕಳ ಸಂರಕ್ಷಣಾ ಯೋಜನೆ ಆಶಾದಾಯಕವಾದ ಹೆಜ್ಜೆಯಾಗಿದೆ. ಏಕೆಂದರೆ ಅದು ಮಕ್ಕಳ ರಕ್ಷಣೆಯಲ್ಲಿ ಪ್ರತಿಯೊಂದು ಸರ್ಕಾರಿ ಇಲಾಖೆಯ ಪಾತ್ರವನ್ನು ಸ್ಪಷ್ಟಪಡಿಸುವುದರ ಮೂಲಕ ಎಲ್ಲಾ ಇಲಾಖೆಗಳಲ್ಲೂ ಜಾಗೃತಿ ಮೂಡಿಸುತ್ತಿದೆ. ಇಂತಹದೊಂದು ಸಮಗ್ರ ಕಾರ್ಯಸೂಚಿಯಿಂದಾಗಿ ಪರಸ್ಪರರತ್ತ ಬೆಟ್ಟು ಮಾಡುವುದು ಮತ್ತು ಜವಾಬ್ದಾರಿಯನ್ನು ಮತ್ತೊಬ್ಬರೆಡೆಗೆ ವರ್ಗಾಯಿಸುವುದು ಇತ್ಯಾದಿಗಳನ್ನು ತಡೆಯಬಹುದು. ಅದರೊಂದಿಗೆ, ತಮ್ಮ ತಮ್ಮ ಪಾತ್ರ ನಿರ್ವಹಿಸಲು ಪ್ರತಿ ಇಲಾಖೆಗೂ ಮೂಲಭೂತ ಸೌಕರ್ಯಗಳು, ಮಾನವ ಸಂಪನ್ಮೂಲ, ತರಬೇತಿ ಮುಂತಾದವುಗಳ ಅಗತ್ಯತೆ ಕುರಿತು ಜಾಗೃತಿ ಉಂಟುಮಾಡಬಹುದು. ರಾಯಚೂರು ಜಿಲ್ಲೆಯಲ್ಲಿ ಈ ಯೋಜನೆ ಯಶಸ್ವಿಯಾಗಿ ಜಾರಿಯಾದರೆ, ಇದನ್ನು ನಮ್ಮ ಅನುಭವಗಳ ಆಧಾರದಲ್ಲಿ ಅಗತ್ಯ ಬದಲಾವಣೆಗಳೊಂದಿಗೆ ರಾಜ್ಯದ ಇತರೆಡೆಗಳಿಗೂ ವಿಸ್ತರಿಸಬಹುದು ಎಂಬುದು ನಮ್ಮ ಆಶಯ.

**(ಎಸ್. ಟಿ. ರಮೇಶ್)**
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ನೇಮಕಾತಿ ಮತ್ತು ತರಬೇತಿ, ಬೆಂಗಳೂರು.



## ಪ್ರಸ್ತಾವನೆ ಮತ್ತು ಹಿನ್ನೆಲೆ


ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯು ತನ್ನ ಭೌಗೋಳಿಕ, ರಾಜಕೀಯ ಮತ್ತು ಸಾಮಾಜಿಕ ಅಂಶಗಳ ಸಂಕೀರ್ಣತೆಯಿಂದಾಗಿ ಸಾಮಾಜಿಕ ಅಭಿವೃದ್ಧಿ ಕ್ಷೇತ್ರಕ್ಕೆ ಯಾವಾಗಲೂ ಒಂದು ಸವಾಲಾಗಿ ಪರಿಣಮಿಸಿದೆ. 2001ರ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆ 16,69,762 ಆಗಿದೆ ; ಇದರಲ್ಲಿ, 25.20% ನಗರ ಪ್ರದೇಶದವರಾದರೆ, ಉಳಿದವರು ಗ್ರಾಮೀಣ ಪ್ರದೇಶದವರು. 8383 ಚ.ಕಿ.ಮೀ. ಸುತ್ತಳತೆ ಇರುವ ಜಿಲ್ಲೆಯಲ್ಲಿ 851.6 ಮಿ.ಮೀ. ಸರಾಸರಿ ಮಳೆ ಇರುತ್ತದೆ. ಬೆಂಗಳೂರು ನಗರವು 507 ಕಿ.ಮೀ. ದೂರದಲ್ಲಿದ್ದರೆ, ಹೈದರಾಬಾದ್ ನಗರ 250 ಕಿ.ಮೀ. ದೂರದಲ್ಲಿದೆ.


2005ರ ಕರ್ನಾಟಕ ಮಾನವಾಭಿವೃದ್ಧಿ ವರದಿಯು ತುಂಬಾ ಕೆಳಮಟ್ಟದ ಸೂಚಕಗಳನ್ನು ನೀಡುವ ಮೂಲಕ ರಾಯಚೂರಿನ ಭಯಾನಕ ಚಿತ್ರಣ ತೆರೆದಿಡುತ್ತದೆ. ಜಿಲ್ಲಾವಾರು ಮುಖ್ಯ ಸೂಚಕಗಳು ನೋಡಿದರೆ, ರಾಯಚೂರು ಜಿಲ್ಲೆಯು ಬಹಳ ಹಿಂದುಳಿದಿದೆ. ಹೆಣ್ಣುಮಕ್ಕಳಲ್ಲಿ 57% 18 ವರ್ಷದೊಳಗೆ ಹಸೆಮಣೆ ತುಳಿಯುತ್ತಾರೆ; ಲಿಂಗಾನುಪಾತ 1000 ಪುರುಷರಿಗೆ 983 ಮಹಿಳೆಯರಿದ್ದರೂ ಮಹಿಳಾ ಸಾಕ್ಷರತಾ ಮಟ್ಟ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದ್ದು ಪ್ರಸ್ತುತ ಇದು 35.9 % ಆಗಿದೆ. ಹಾಗೆಯೇ, ಬೇಸರದ ಅಂಕಿಅಂಶ ಏನೆಂದರೆ, ರಾಯಚೂರಿನ ಐದರಲ್ಲಿ ಒಂದು ಭಾಗ (ಅಂದರೆ 18%) ಮಕ್ಕಳು ಕುಟುಂಬದಿಂದ ಹೊರಗೆ ದುಡಿಯುತ್ತಿದ್ದಾರೆ ಎನ್ನುವಂತಹದ್ದು.



ರಾಯಚೂರಿನ ಪರಿಶಿಷ್ಟ ಜಾತಿಯು ಜಿಲ್ಲೆಯ ಒಟ್ಟು ಜನಸಂಖ್ಯೆಯ 19.5% ಇದ್ದರೆ, ಪರಿಶಿಷ್ಟ ಪಂಗಡ 18.1% ಇದ್ದು ಇದು ರಾಜ್ಯದಲ್ಲಿಯೇ ಗರಿಷ್ಠವಾಗಿದೆ. ಈ ಪ್ರಾಂತವು ಪರಂಪರಾಗತವಾಗಿ ಪಾಳೆಗಾರ ಸಂಸ್ಕೃತಿಯನ್ನು ಹೊಂದಿದೆ. ಜಿಲ್ಲೆಯ ಮುಸ್ಲಿಂ ಜನಸಂಖ್ಯೆ ರಾಷ್ಟ್ರೀಯ ಸರಾಸರಿಗಿಂತ ಜಾಸ್ತಿ ಇದೆ. ಸಂಪನ್ಮೂಲ ಕೊರತೆ ಮತ್ತು ಬಡತನ ಜಿಲ್ಲೆಯ ಜನತೆಯಲ್ಲಿ ಏಕರೂಪವಾಗಿ ಹರಡಿರುವುದಿಲ್ಲ, ಲಿಂಗ, ಜಾತಿ, ಸಮುದಾಯ ಮತ್ತು ಭೌಗೋಳಿಕ ಆದಾರದಲ್ಲಿ ಬಡತನ ವ್ಯಾಪಿಸಿದೆ. ದಲಿತ, ಆದಿವಾಸಿ ಮತ್ತು ಮುಸ್ಲಿಂ ಜನಸಮುದಾಯಗಳು ಸಾಮಾಜಿಕ ಮತ್ತು ಭೌತಿಕ ಸಂಪನ್ಮೂಲಗಳ ಕೊರತೆ ಅನುಭವಿಸಿದರೆ, ಈ ಸಮುದಾಯಗಳ ಮಹಿಳೆಯರು ಮತ್ತು ಮಕ್ಕಳು ಬಡತನ ಹಾಗೂ ಬಲಹೀನತೆಯಿಂದ ಹೆಚ್ಚುವರಿಯಾಗಿ ನರಳುತ್ತಾರೆ.

## ರಾಯಚೂರಿನ ನಕ್ಷೆ





## ರಾಯಚೂರು: ಮುಖ್ಯ ಅಂಕಿಅಂಶಗಳು

| | |
|---|---|
| ತಾಲ್ಲೂಕುಗಳು | 5 |
| ಪಂಚಾಯ್ತಿಗಳು | 164 |
| ಹಳ್ಳಿಗಳು | 878 |
| ಜನಸಾಂದ್ರತೆ | 199 ಚ.ಕ.ಮೀ.ಗೆ |
| ಒಟ್ಟು ಜನಸಂಖ್ಯೆ | 16,69,762 |
| ಪುರುಷರು | 8,41,840 |
| ಮಹಿಳೆಯರು | 8,27,922 |
| 3 ವರ್ಷದೊಳಗಿನ ಮಕ್ಕಳು | 1,32,000 |
| ಸಾಕ್ಷರತಾ ಮಟ್ಟ | 48.8 |
| ಮಹಿಳಾ ಸಾಕ್ಷರತಾ ಮಟ್ಟ | 35.9 |
| ಲಿಂಗಾನುಪಾತ | 983 |
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | 46 |
| ಉಪ ಕೇಂದ್ರಗಳು | 235 |
| ಪ್ರಾಥಮಿಕ ಶಾಲೆಗಳು | 1661 |
| ಎಸ್.ಎಸ್.ಎ. 2009ರ ಪ್ರಕಾರ ಶಾಲೆ ಬಿಟ್ಟ ಮಕ್ಕಳ ಸಂಖ್ಯೆ | 2359 |
| 2005ರ ಜೂನ್ ಜುಲೈನಲ್ಲಿ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸಂಘದ ಅಡಿಯಲ್ಲಿ ನಡೆಸಿದ ಮಕ್ಕಳ ಸಮೀಕ್ಷೆ ಪ್ರಕಾರ ಬಾಲಕಾರ್ಮಿಕರ ಸಂಖ್ಯೆ | 21,446 |

ಮೂಲ: ಜನಗಣತಿ, ಭಾರತ ಸರ್ಕಾರ, 2001.





## ರಕ್ಷಣೆಗೆ ಸಂಬಂಧಿಸಿದ ವಿಚಾರಗಳು

ಭಾರತದಲ್ಲಿ “ಬಾಲ್ಯ” ಎನ್ನುವುದು ಏಕರೂಪವಾದ ಅನುಭವ ಅಲ್ಲ; ವಿವಿಧ ಹಿನ್ನೆಲೆಯ ಮಕ್ಕಳು ಅನೇಕ ವೈವಿಧ್ಯಮಯವಾದ “ಬಾಲ್ಯ” ಅನುಭವಿಸುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ದೈಹಿಕ ಮತ್ತು ಮಾನಸಿಕ ಬಲ, ಭೌಗೋಳಿಕ ಪರಿಸರ, ಸೌಲಭ್ಯಗಳ ಲಭ್ಯತೆ, ಅದರ ಸಾಮರ್ಥ್ಯ ಹಾಗೂ ಗುಣಮಟ್ಟ ಮತ್ತು ಸಹಭಾಗಿತ್ವದ ಭಾಗೀದಾರರಲ್ಲಿನ ಏರುಪೇರುಗಳು ಭಾರತದ ಮಕ್ಕಳ ಅಪಾಯದ ಮಟ್ಟವನ್ನು ನಿರ್ಣಯಿಸುತ್ತದೆ. ಭಾರತದಲ್ಲಿನ ಮಗು ವಯೋಮಾನದ ಶ್ರೇಣೀಕರಣದಿಂದ ತಾರತಮ್ಯಕ್ಕೆ ಒಳಗಾಗುವುದಲ್ಲದೆ, ಸಮಾಜದಲ್ಲಿನ ಅಸಮಾನತೆಗಳಿಂದಲೂ ತಾರತಮ್ಯ ಅನುಭವಿಸುತ್ತದೆ. ಆದುದರಿಂದ, ಭಾರತದ ಎಲ್ಲ ಮಕ್ಕಳು ಮಗುವಾಗಿರುವಾಗಲೇ ಒಂದಲ್ಲ ಒಂದು ರೀತಿಯ ಹಿಂಸೆಗೆ ಒಳಗಾಗುತ್ತಾರೆ. ಮಕ್ಕಳ ದುರ್ಬಳಕೆ ಕುರಿತು 2006ರಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಪ್ರಕಟಿಸಿದ ಅಧ್ಯಯನ ಇದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಸ್ವಾತಂತ್ರ್ಯದ ನಂತರವೂ ಅನೇಕ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಆಂದೋಲನಗಳು, ನೀತಿನಿಯಮಗಳು ಇದ್ದರೂ ಭಾರತದ ಮಕ್ಕಳು ಈಗಲೂ ಹೆಚ್ಚಿನ ರೀತಿಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗೆ ತುತ್ತಾಗುತ್ತಾರೆ.





ಮಕ್ಕಳ ಹಕ್ಕುಗಳ ಕುರಿತು ಚರ್ಚಿಸುವಾಗ, ಮಕ್ಕಳ ಶೋಷಣೆ ನಮ್ಮ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಉಂಟುಮಾಡುವ ಅಪಾಯವನ್ನು ಅರ್ಥಮಾಡಿಕೊಳ್ಳುವುದು ಅತಿ ಮುಖ್ಯ. ಶೋಷಣೆಯು ಮಕ್ಕಳನ್ನು ಶಾಲೆಯಿಂದ ಹೊರಗಿಡುವುದಲ್ಲದೆ, ಅನಾರೋಗ್ಯ, ದೈಹಿಕ ಹಾಗೂ ಮಾನಸಿಕ ದುರ್ಬಳಕೆಗೆ ಎಡೆಮಾಡುವುದರಿಂದ, ಅವರ ಬೆಳವಣಿಗೆಯ ಮತ್ತು ಪೂರ್ಣ ಪ್ರಮಾಣದ ಅಭಿವೃದ್ಧಿಯ ಅವಕಾಶಗಳನ್ನು ಕಿತ್ತುಕೊಂಡು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಇದರ ನಿರಂತರ ಪುನರಾವರ್ತನೆಯಿಂದ ಸಮಾಜದ ಸುಲಲಿತ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕುಂದು ಉಂಟಾಗುತ್ತದೆ.


'ಮಕ್ಕಳ ಸಂರಕ್ಷಣೆ' ಎಂದು ಯುನಿಸೆಫ್ ಬಳಸುವಾಗ ಅದರರ್ಥ ಹಿಂಸೆ, ಶೋಷಣೆ, ದುರ್ಬಳಕೆ ಮತ್ತು ನಿರ್ಲಕ್ಷ್ಯದಿಂದ ರಕ್ಷಣೆ ಎಂದಾಗಿರುತ್ತದೆ. ಮಗುವಿನ ಎಲ್ಲ ಹಕ್ಕುಗಳ ಉಲ್ಲಂಘನೆಗಳು ಮಾನವ ಹಕ್ಕು ಉಲ್ಲಂಘನೆಯಾಗಿದ್ದು, ಇವು ಮಕ್ಕಳ ಬದುಕು ಮತ್ತು ವಿಕಾಸಕ್ಕೆ ವ್ಯಾಪಕವಾದ, ಗುರುತಿಸಲ್ಪಡದ ಮತ್ತು ವರದಿಯಾಗದ ತಡೆಗೋಡೆಗಳಾಗಿವೆ. ಹಿಂಸೆ, ಶೋಷಣೆ, ದುರ್ಬಳಕೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗುವ ಮಕ್ಕಳು ಅಪಾಯಗಳಿಗೆ ತುತ್ತಾಗುತ್ತಾರೆ: ಅವೆಂದರೆ

- ಹ್ರಸ್ವವಾದ ಆಯುಸ್ಸು
- ಕೆಳಮಟ್ಟದ ದೈಹಿಕ ಮತ್ತು ಮಾನಸಿಕ ಆರೋಗ್ಯ
- ಶೈಕ್ಷಣಿಕ ಸಮಸ್ಯೆಗಳು (ಶಾಲೆಯಿಂದ ಹೊರಗುಳಿಯುವುದು ಸೇರಿದಂತೆ)
- ಕೀಳು ಗುಣಮಟ್ಟದ ಕೆಲಸ ಮತ್ತು ಮಕ್ಕಳು ಯುವಕರು ಹಾಗೂ ವಯಸ್ಕರಂತೆ
- ಜೀವಿಸುವುದು
- ನಂತರದ ಬದುಕಿನಲ್ಲಿ ನಿರ್ಲಕ್ಷ್ಯದ ಪೋಷಕತನ
- ಬಿಕಾರಿತನ, ಅಲೆಮಾರಿತನ, ಸ್ಥಳಾಂತರ

ಮಕ್ಕಳ ರಕ್ಷಣೆಯು ಮಗುವಿನ ಅಭಿವೃದ್ಧಿಯ ಬೇರೆ ಬೇರೆ ಅಂಶಗಳಿಗೆ ಸಂಬಂಧಪಟ್ಟಿರುತ್ತದೆ. ದೇಹಪ್ರತಿರೋಧಕ್ಕಾಗಿ ಚುಚುಮದ್ದು ಹಾಕಿರುವ ಮಗು ನಿರಂತರವಾಗಿ ಹೊಡೆತಕ್ಕೆ ಒಳಗಾದರೆ, ಆ ಮಗು ಆರೋಗ್ಯವಂತ ಮಗು ಅಲ್ಲ; ಶಾಲೆಗೆ ಹೋಗುವ ಮಗು ತನ್ನ ವಂಶೀಯತೆಯ ಕಾರಣಕ್ಕಾಗಿ ನಿಂದಿಸಲ್ಪಡುವುದಾದರೆ, ಆ ಮಗುವು ಕಲಿಕಾ ವಾತಾವರಣವನ್ನು ಖುಷಿಯಿಂದ ಅನುಭವಿಸುವುದಿಲ್ಲ. ಹದಿಹರೆಯದಲ್ಲಿರುವ ಮಗುವಿನ ಬೆಳವಣಿಗೆಯನ್ನು ಸರಿಯಾಗಿ ಬೆಂಬಲಿಸದೆ ಮತ್ತು ಅರ್ಥಮಾಡಿಕೊಳ್ಳದೆ ಇದ್ದಲ್ಲಿ, ಮಗುವು ಸಾಗಾಣಿಕೆ ಸೇರಿದಂತೆ ವಿವಿಧ ರೀತಿಯ ಶೋಷಣೆಗೆ ಒಳಗಾಗಬಹುದು.

ನಿರಂತರ ಕ್ರಮಬದ್ಧ ಸೂಕ್ತ ರಕ್ಷಣೆಯಿಂದ ಮಗುವು ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ ಆರೋಗ್ಯವಂತನಾಗುವುದಲ್ಲದೆ, ಅವನಲ್ಲಿನ ಆತ್ಮವಿಶ್ವಾಸ ಮತ್ತು ಆತ್ಮಗೌರವ ಹೆಚ್ಚಿಸುತ್ತದೆ; ಮತ್ತು ವಯಸ್ಕನಾದಾಗ ತನ್ನದೂ ಸೇರಿದಂತೆ ಇತರೆ ಮಕ್ಕಳನ್ನು ಶೋಷಣೆ ಮಾಡುವ ಸಾಧ್ಯತೆಗಳಿಗೆ ಹೋಗುವುದು ತೀರಾ ಕಡಿಮೆ.





## ರಾಯಚೂರಿನಲ್ಲಿ ರಕ್ಷಣೆಗೆ ಸಂಬಂಧಿಸಿದ ವಿಚಾರಗಳು

ಜಾಗತಿಕ ಮಾನವಾಭಿವೃದ್ಧಿ ಸೂಚಕದಲ್ಲಿ ಕರ್ನಾಟಕ ರಾಜ್ಯ ಸರಾಸರಿಯಿಂದ ಸ್ವಲ್ಪ ಮೇಲ್ಮಟ್ಟದಲ್ಲಿದ್ದು, 120ನೇ ಸ್ಥಾನದಲ್ಲಿದೆ. (ಭಾರತ ರ್‍ಯಾಂಕಿಂಗ್‌ನಲ್ಲಿ 127 ಇತ್ತು).

ಆದರೆ, ರಾಯಚೂರಿನ ವಿಚಾರದಲ್ಲಿ, ಅಭಿವೃದ್ಧಿ ಸೂಚಕಗಳು ಮಕ್ಕಳ ಮತ್ತು ಮಹಿಳೆಯರ ದುಃಸ್ಥಿತಿಯನ್ನು ತೋರಿಸುತ್ತದೆ. ಬಡತನ, ಗುಳೆ (ವಲಸೆ) ಹೋಗುವುದು, ನಿರುದ್ಯೋಗ, ಮೂಲಭೂತ ಸೇವೆಗಳ ಕೊರತೆ, ಉದ್ಯೋಗ ಅವಕಾಶಗಳ ಕೊರತೆ, ಅಧಿಕಾರರಹಿತ ಪಂಚಾಯ್ತಿಗಳು ಮತ್ತು ಬಹಿಷ್ಕೃತವಾದ ಸಮುದಾಯಗಳು ಇವೆಲ್ಲ ಮಕ್ಕಳು ಮತ್ತು ಮಹಿಳೆಯರ ಮೇಲಿನ ಶೋಷಣೆ ನಿರಂತರವಾಗಿ ಮುಂದುವರೆಯಲು ಕೆಲವು ಮುಖ್ಯ ಕಾರಣಗಳಾಗಿವೆ.

ಕರ್ನಾಟಕ ಸರ್ಕಾರ ಮಕ್ಕಳಿಗಾಗಿ ರಾಜ್ಯಮಟ್ಟದ ಕ್ರಿಯಾಯೋಜನೆ (2003–2010), ವಿಶೇಷ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಕ್ರಿಯಾ ಯೋಜನೆ (2002–2007, ಈಗ 2012 ವರೆಗೆ) ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಮತ್ತು ಮಕ್ಕಳ ಅಭಿವೃದ್ಧಿ ನೀತಿಗಳನ್ನು ರೂಪಿಸಿದಾಗ, ರಾಯಚೂರಿನಲ್ಲಿನ ಮಕ್ಕಳ ಸ್ಥಿತಿಗತಿಯಲ್ಲಿ ಅಂದರೆ, ಆರೋಗ್ಯ, ಶಿಕ್ಷಣ, ಒತ್ತಡದ ದುಡಿಮೆಯಿಂದ ಬಿಡುಗಡೆ, ಬಾಲ್ಯವಿವಾಹ, ಶೋಷಣೆ, ಹಿಂಸೆ, ನಿಂದನೆ ಮುಂತಾದ ಸಮಸ್ಯೆಗಳನ್ನು ಹತ್ತಿಕ್ಕಲು ಪ್ರತ್ಯೇಕ ಕಾರ್ಯಕ್ರಮಗಳು ಇರಲಿಲ್ಲ. ಜಿಲ್ಲೆಯ ಅಭಿವೃದ್ಧಿಗಾಗಿ ಕೆಲಸ ಮಾಡಲು ರಾಜಕೀಯ ಇಚ್ಛಾಶಕ್ತಿ ಮತ್ತು ಆಸಕ್ತಿಯ ಕೊರತೆಯು ಮಕ್ಕಳು ಮತ್ತು ಮಹಿಳೆಯರನ್ನು ಈ ಸ್ಥಿತಿಯಲ್ಲಿಡಲು ಮತ್ತಷ್ಟು ಪರಿಣಾಮ ಬೀರುವಂತೆ ಮಾಡಿದೆ.



ಬಾಲ್ಯವಿವಾಹವು ರಾಯಚೂರಿನಲ್ಲಿ ಸಾರ್ವತ್ರಿಕವಾಗಿದೆ. 2005 ರ ಕರ್ನಾಟಕ ಮಾನವಾಭಿವೃದ್ಧಿ ವರದಿ ಪ್ರಕಾರ ರಾಯಚೂರಿನಲ್ಲಿ ನಡೆದ ವಿವಾಹಗಳಲ್ಲಿ ಶೇ. 73 ರಷ್ಟು 18 ವರ್ಷದೊಳಗಿನವರದ್ದಾಗಿತ್ತು. ಜಿಲ್ಲೆಯ ಮಹಿಳೆಯರ ಮೊದಲನೆಯ ಗರ್ಭಧಾರಣೆಯ ಸರಾಸರಿ ವಯಸ್ಸು 16.5 ವರ್ಷವಾಗಿದೆ.

ಆಗಲೇ ಹೇಳಿದಂತೆ, ರಾಯಚೂರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿವೆ; ಅವರ ಸಾಕ್ಷರತಾ ಪ್ರಮಾಣ ಕ್ರಮವಾಗಿ 38.7% ಮತ್ತು 29% ಇದ್ದು ಕನಿಷ್ಠ ಮಟ್ಟದಲ್ಲಿದೆ. ಶಾಲಾ ದಾಖಲಾತಿ ಪ್ರಮಾಣ ಕೂಡಾ ರಾಜ್ಯದಲ್ಲಿಯೇ ಕನಿಷ್ಠ ಮಟ್ಟದಲ್ಲಿದೆ (58%). ಇದು ಇಲ್ಲಿನ ಬಾಲಕಾರ್ಮಿಕರ ಸ್ಥಿತಿಯನ್ನು ಸೂಚಿಸುತ್ತದೆ.

ರಾಯಚೂರಿನ 5 ರಿಂದ 14 ವರ್ಷದೊಳಗಿನ ಮಕ್ಕಳಲ್ಲಿ ಶೇ. 16 ಕುಟುಂಬದಿಂದ ಹೊರಗೆ ಜೀತಕ್ಕೆ ಅಥವಾ ಕೂಲಿಗೆ ದುಡಿಯುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಕೃಷಿ ಕ್ಷೇತ್ರದ ವಿವಿಧ ಹಂತಗಳಲ್ಲಿ ವಾರಕ್ಕೆ ಸರಾಸರಿ 45 ಗಂಟೆಗಳ ಕಾಲ ದುಡಿಯುತ್ತಿದ್ದಾರೆ. ಶೇ. 75 ರಷ್ಟು ಮಕ್ಕಳು ತಮ್ಮ ಸ್ವಂತ ಮನೆಗಳಲ್ಲಿ ಅಥವಾ ಕೂಲಿಗಾಗಿ ಮನೆಕೆಲಸದಲ್ಲಿ ತೊಡಗಿದ್ದಾರೆ, ಉಳಿದವರು ಅಂಗಡಿ ಮುಂಗಟ್ಟುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಲ್ಲದೆ, ಹತ್ತಿಬೀಜ ಕ್ರಾಸಿಂಗ್, ಹೊಗೆಸೊಪ್ಪು, ಮೆಣಸು, ಕಲ್ಲು ಹೊಡೆಯುವುದು ಮುಂತಾದ ಅಪಾಯಕಾರಿ ಕ್ಷೇತ್ರಗಳಲ್ಲಿ ಮಕ್ಕಳು ದುಡಿಯುತ್ತಿದ್ದಾರೆ.

5–14 ವರ್ಷದ ಶೇ. 23 ರಷ್ಟು ಮಕ್ಕಳು ಎಂದಿಗೂ ಶಾಲೆಗೆ ದಾಖಲಾಗದವರಾಗಿದ್ದಾರೆ, ಶೇ. 17 ರಷ್ಟು ಮಕ್ಕಳು ಹಿರಿಯ ಪ್ರಾಥಮಿಕ ತಲುಪುವ ಮೊದಲು ಶಾಲೆ ಬಿಟ್ಟವರು. ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಶೇ. 40 ಆಗಿದೆ. ಶಾಲೆ ಬಿಡಲು ಮುಖ್ಯ ಕಾರಣ ಮನೆಗೆಲಸವೇ ಆಗಿದೆ. ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳ ಕಾರಣದಿಂದಾಗಿಯೂ ಅನೇಕ ಮಕ್ಕಳು ಶಾಲೆ ಬಿಡುತ್ತಾರೆ. ಇತರೆ ಕಾರಣಗಳೆಂದರೆ, ಹಣದ ಕೊರತೆ ಮತ್ತು ಶಾಲಾ ಶಿಕ್ಷಣದಲ್ಲಿ ಆಸಕ್ತಿ ಇಲ್ಲದೆ ಇರುವುದು. ಅಲ್ಲದೆ ಸಾಮಾನ್ಯವಾಗಿ 11 ರಿಂದ 14 ವರ್ಷದೊಳಗೆ ಹೆಣ್ಣುಮಕ್ಕಳು ಋತುಮತಿಯರಾದಾಗ ಶಾಲೆ ಬಿಡುತ್ತಾರೆ ಎಂಬುದು ಗಮನಾರ್ಹ ಅಂಶ.

ಮಕ್ಕಳ ಮೇಲಿನ ಹಿಂಸೆ ವ್ಯಾಪಕವಾಗಿದ್ದು, ಜೀವನಕ್ರಮದ ಭಾಗವಾಗಿದೆ. ರಾಯಚೂರಿನಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯವಾಣಿಗಳು, ಸಾಂತ್ವನ ಮತ್ತು ಸಿಂಧುವಾಣಿ, ಮಹಿಳಾ ಸಮಖ್ಯಾ ಸ್ಥಾಪಿಸಿರುವ ಸಹಾಯವಾಣಿಗಳ ವರದಿ ಪ್ರಕಾರ 2002 ರಿಂದ ಸುಮಾರು 678 ಕರೆಗಳು ತಿಂಗಳಿಗೆ 10 ಕರೆಯಂತೆ ಸ್ವೀಕರಿಸಿವೆ. ಈ ಪ್ರಕರಣಗಳು ಮಹಿಳೆಯರ ಮೇಲಿನ ದೌರ್ಜನ್ಯ, ಆರ್ಥಿಕ ಮತ್ತು ಮಾನಸಿಕ ಕಿರುಕುಳ, ವರದಕ್ಷಿಣೆ ಕಿರುಕುಳ, ಮಧುವೆಯ ಸುಳ್ಳು ಭರವಸೆಯ ಮೇಲೆ ಹೆಣ್ಣುಮಕ್ಕಳನ್ನು / ಅಪ್ರಾಪ್ತ ಬಾಲಕಿಯರನ್ನು ವಂಚಿಸುವುದು ಇವುಗಳಿಗೆ ಸಂಬಂಧಿಸಿದ್ದಾಗಿದೆ.




ಇದಲ್ಲದೆ, ಬೀದಿ ಮಕ್ಕಳು, ನಿರ್ಲಕ್ಷ್ಯಕ್ಕೊಳಗಾದ ಮಕ್ಕಳು, ಓಡಿಬಂದ ಮಕ್ಕಳು, ತಾವಾಗಿಯೇ ಓಡಿಬಂದ ಮತ್ತು ದೊಡ್ಡವರಿಂದ ಪ್ರೇರೇಪಿಸಲ್ಪಟ್ಟು ಓಡಿಬಂದ ಅಥವಾ ಇತರೆ ನಗರಗಳಿಂದ / ರಾಜ್ಯ ಗಡಿಯಿಂದ ಮಾರಲ್ಪಟ್ಟ / ಸಾಗಿಸಲ್ಪಟ್ಟ ಮಕ್ಕಳು ಯಾವುದೇ ಪೋಷಣೆ ಮತ್ತು ಬೆಂಬಲ ಇಲ್ಲದೆ ರಾಯಚೂರಿಗೆ ಬಂದು ಸೇರುತ್ತಾರೆ.

ಹೈದರಾಬಾದ್, ಮುಂಬೈ ಮತ್ತು ಪುಣೆಯಿಂದ ಮಕ್ಕಳು ಮತ್ತು ಯುವಜನರು ದುಡಿಮೆ ಅಥವಾ ಲೈಂಗಿಕ ದಂಧೆಗಾಗಿ ಸಾಗಿಸಲ್ಪಡುತ್ತಾರೆ. ರಾಯಚೂರಿನ ಕೆಲವು ಪ್ರದೇಶಗಳಲ್ಲಿ ಹೆಣ್ಣುಮಕ್ಕಳನ್ನು ಶೋಷಿಸುವಂತಹ ದೇವದಾಸಿ ಪದ್ಧತಿ ಇನ್ನೂ ಜೀವಂತವಾಗಿದೆ. ರಾಯಚೂರಿನಿಂದ ಕರಾರು ಮದುವೆ ಹೆಸರಿನಲ್ಲಿ ಯುವತಿಯರು ಲಿಂಗಾನುಪಾತ ಕಡಿಮೆಯಿರುವ ಗುಜರಾತಿಗೆ ಸಾಗಿಸಲ್ಪಡುವುದರ ವರದಿಗಳೂ ಇವೆ.

ಜಿಲ್ಲೆಯೊಳಗಿನ ಶೀಘ್ರಗತಿಯ ನಗರೀಕರಣ, ನಿರುದ್ಯೋಗ, ಮೂಲಭೂತ ಸೇವೆಗಳ ಕೊರತೆ, ಉದ್ಯೋಗಾವಕಾಶಗಳ ಕೊರತೆ ಮತ್ತು ಕುಟುಂಬ ಸಂಬಂಧಗಳಲ್ಲಿನ ಸಡಿಲತೆ ಇವು ಯುವಜನತೆ ಮತ್ತು ಮಕ್ಕಳನ್ನು ಶೋಷಣೆಯ ಜಾಲಕ್ಕೆ ತಳ್ಳುವ ಇತರೆ ಅಂಶಗಳಾಗಿವೆ. ಮಕ್ಕಳ ರಕ್ಷಣೆಯ ಕುರಿತು ಯಾವುದೇ ರೀತಿಯ ಕಾಳಜಿ ಮತ್ತು ಪ್ರಜ್ಞೆ ಇಲ್ಲದಿರುವುದು ಆತಂಕಕಾರಿಯಾದದ್ದು; ಅವರ ಬದುಕಿನ ಬಗ್ಗೆ ಯಾವುದೇ ಮೌಲ್ಯ ಕಲ್ಪಿಸಲಾಗಿಲ್ಲ ಎಂದು ಮೇಲ್ನೋಟಕ್ಕೆ ಕಾಣುತ್ತದೆ ಮತ್ತು ಅವರಿಗಾಗಿ ಸುರಕ್ಷಿತವಾದ ವಾತಾವರಣ ಮಾಡುವುದಕ್ಕೆ ಏನೂ ಪ್ರಯತ್ನಗಳು ಆಗಲಿಲ್ಲ.

ಈ ಪರಿಸ್ಥಿತಿ ಕೈ ಮೀರುವ ಮುನ್ನ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಮಕ್ಕಳನ್ನು ರಕ್ಷಿಸುವ ಸಲುವಾಗಿ, ಮಕ್ಕಳಿಗೆ ಬೆಂಬಲ ಮತ್ತು ಸುರಕ್ಷಿತ ಜಾಲ ವ್ಯವಸ್ಥೆ ನೀಡುವಂತಹ ವ್ಯವಸ್ಥೆಗಳನ್ನು ಪ್ರೋತ್ಸಾಹಿಸಿ, ಬಲಪಡಿಸುವ ಅವಶ್ಯಕತೆ ಇದೆ. ಸೇವೆಗಳ ಸಮನ್ವಯತೆ ಮತ್ತು ಸಹಭಾಗಿತ್ವ ಆಗಬೇಕಿದೆ ; ಮಕ್ಕಳ ಅಭ್ಯುದಯಕ್ಕಾಗಿ ಪ್ರಯತ್ನಿಸುವ ವ್ಯಕ್ತಿಗಳನ್ನು ಗೌರವಿಸುವುದು ಮತ್ತು ಅವರಿಗೆ ತರಬೇತಿಯನ್ನು ನೀಡಬೇಕಿದೆ.






## ಮಕ್ಕಳ ಸಂರಕ್ಷಣಾ ಯೋಜನೆ, ರಾಯಚೂರಿನ ಸಂಕಲ್ಪ

ರಾಯಚೂರು ಮಕ್ಕಳ ಸಂರಕ್ಷಣಾ ಯೋಜನೆಯ ಪರಿಕಲ್ಪನೆ; ಪ್ರತಿಯೊಂದು ಮಗು ಅಗತ್ಯವಾದ ಅಭಿವೃದ್ಧಿ ಸೇವೆಗಳೊಂದಿಗೆ ಸುರಕ್ಷಿತವಾಗಿರಬೇಕು. ಇದು ಪ್ರತಿಯೊಂದು ಸರ್ಕಾರಿ ಇಲಾಖೆಗಳ ಪ್ರಮುಖ ಕಾರ್ಯ ಸೂಚಿಯೊಂದಿಗೆ ರಾಯಚೂರಿನ ಪ್ರತಿಯೊಬ್ಬ ನಾಗರಿಕನ ಬದ್ಧತೆಯಾಗಬೇಕು. ಜಿಲ್ಲೆಯಲ್ಲಿ ಜಾರಿ ಮಾಡಬೇಕಿರುವ ಕಾರ್ಯತಂತ್ರಗಳು, ವಿವಿಧ ಭಾಗೀದಾರಿಗಳ ಜವಾಬ್ದಾರಿಗಳು ಮತ್ತು 5 ವರ್ಷದ ಅವಧಿಯಲ್ಲಿ ಆಗಬಹುದಾದ ಫಲಿತಾಂಶಗಳನ್ನು ಒಳಗೊಂಡಿದೆ.

2001ರ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ರಾಜ್ಯ ಕ್ರಿಯಾಯೋಜನೆ, ರಾಜ್ಯಮಟ್ಟದ ಮಕ್ಕಳ ಕ್ರಿಯಾಯೋಜನೆ (2003–2010), ಮಹಿಳೆಯರು ಮತ್ತು ಮಕ್ಕಳ ಸಾಗಾಣಿಕೆ ತಡೆ ಕ್ರಿಯಾ ಯೋಜನೆ (2007) ಇವುಗಳಲ್ಲಿ ಮಕ್ಕಳ ಕುರಿತು ರಾಜ್ಯ ಸರ್ಕಾರವು ತೋರಿರುವ ಬದ್ದತೆಗಳನ್ನು ಮನಗಂಡು, ಜಿಲ್ಲಾ ಸಂರಕ್ಷಣಾ ಯೋಜನೆಯು ಎಲ್ಲ ಮಕ್ಕಳಿಗೂ ಸುರಕ್ಷಿತವಾದ ವಾತಾವರಣವನ್ನು ಉತ್ತೇಜಿಸುವ ಮತ್ತು ಕಡ್ಡಾಯ ದುಡಿಮೆ, ಸಾಗಾಣಿಕೆ, ಬಾಲ್ಯವಿವಾಹ ಮುಂತಾದವು ಉಲ್ಲಂಘನೆಯಾದಾಗ ಅದನ್ನು ಸವಾಲಾಗಿ ಸ್ವೀಕರಿಸಲು ಮತ್ತು ಪರಿಹರಿಸಲು ಸೂಕ್ತ ವ್ಯವಸ್ಥೆಗಳನ್ನು ಸೃಷ್ಟಿಸುವ ಸಂಕಲ್ಪ ಮಾಡಿದೆ.





ಸುರಕ್ಷಿತವಾದ ವಾತಾವರಣ ನಿರ್ಮಾಣ ಮಾಡುವತ್ತ ಆರೋಗ್ಯ, ಶಿಕ್ಷಣ, ಶಾಲೆ, ನೀರು, ಸ್ವಚ್ಚತೆ ಮತ್ತು ರಕ್ಷಣೆ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಸೇವೆಗಳು ಮತ್ತು ಕಾರ್ಯಕ್ರಮಗಳನ್ನು ಒಟ್ಟುಗೂಡಿಸಿ, ಇವೆಲ್ಲವುಗಳ ಸಮನ್ವಯಕ್ಕಾಗಿ ಸಂರಕ್ಷಣಾ ಯೋಜನೆ ಪ್ರಯತ್ನಿಸುತ್ತದೆ.

ಮಕ್ಕಳ ಸಂರಕ್ಷಣಾ ಯೋಜನೆ ಒಂದು ಮಾದರಿ ಯೋಜನೆಯ ಪ್ರಯತ್ನ ಇದರಲ್ಲಿ ಮಕ್ಕಳ ಸಂರಕ್ಷಣೆಗೆ ಜಿಲ್ಲಾ ಮಟ್ಟದಲ್ಲಿ ಸಹಭಾಗಿತ್ವದ ಮೂಲಕ ವಿವಿಧ ತಂತ್ರ ಹಾಗೂ ವಿಧಾನಗಳನ್ನು ಅಳವಡಿಸುವುದರ ಮುಖಾಂತರ ಮಾದರಿಯನ್ನು ತಯಾರು ಮಾಡುವುದೇ ಈ ಯೋಜನೆಯ ಪ್ರಮುಖ ಪಾತ್ರ. ಈ ಅಂಶಗಳನ್ನು ಈಗಾಗಲೇ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ತನ್ನ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯಲ್ಲಿ (ICPS) ಸ್ಪಷ್ಟವಾಗಿ ತಿಳಿಸಿದೆ.

## ಗುರಿ

ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ ಮೂಲಭೂತ ಶಿಕ್ಷಣ, ಮೂಲಭೂತ ಆರೋಗ್ಯ ಸೇವೆ ಪಡೆಯಲು ಅವಕಾಶ ಸೃಷ್ಟಿಸುವುದರ ಜೊತೆಗೆ ಮಕ್ಕಳ ಮೇಲಿನ ಎಲ್ಲ ವಿಧವಾದ ಶೋಷಣೆ ಮತ್ತು ಹಕ್ಕುಗಳ ಉಲ್ಲಂಘನೆಯಿಂದ ಅವರ ರಕ್ಷಣೆಯನ್ನು ಖಾತ್ರಿಪಡಿಸುವುದು.

## ಉದ್ದೇಶಗಳು

- ರಕ್ಷಣೆಯ ಉತ್ತೇಜನೆಯನ್ನು ಪ್ರತಿರೋಧ ಎನ್ನುವ ಸಮಗ್ರವಾದ ನಿಲುವಿನಿಂದ ನೋಡಲಾಗಿದೆ. ಮಕ್ಕಳ ರಕ್ಷಣೆಯ ಪ್ರಯೋಜನಗಳು ಮತ್ತು ಸಮುದಾಯ ಅಭಿವೃದ್ಧಿಗೆ ಇದರ ಕೊಡುಗೆ ಬಗ್ಗೆ ಮುಖ್ಯ ಭಾಗೀದಾರರಿಗೆ ಜಾಗೃತಿ ಮತ್ತು ವಾತಾವರಣ ನಿರ್ಮಾಣ.
- ಮಕ್ಕಳ ರಕ್ಷಣೆಗೆ ಇರುವಂತಹ ವ್ಯವಸ್ಥೆಗಳಾದ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ವಿಶೇಷ ಮಕ್ಕಳ ಪೊಲೀಸ್ ಘಟಕ, ಮಕ್ಕಳ ವೇದಿಕೆ / ಯುವಕರ ವೇದಿಕೆ / ಮಹಿಳಾ ಸಂಘ ಇವುಗಳನ್ನು ಬಲಪಡಿಸುವುದು ಮತ್ತು ಪರಸ್ಪರ ಸಹಭಾಗಿತ್ವ ಕಲ್ಪಿಸಿ ಕಾಪಾಡುವುದು.
- ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಸಮಸ್ಯೆಗಳನ್ನು ತಡೆಗಟ್ಟಲು ಮುಖ್ಯ ಭಾಗೀದಾರರಾದ ಜಿಲ್ಲಾ ಪಂಚಾಯ್ತಿ ಮತ್ತು ಜನಪ್ರತಿನಿಧಿಗಳೊಂದಿಗೆ ಸೇರಿ ಸಮುದಾಯ ಆಧಾರಿತವಾಗಿ ಕಾಲ ಕಾಲಕ್ಕೆ ಕ್ರಿಯಾ ಯೋಜನೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ಜಾರಿ ಮಾಡುವುದು.





- ಬಾಲ್ಯವಿವಾಹ ತಡೆ ಮತ್ತು ನಿರ್ಮೂಲನೆ ಹಾಗೂ ಮಕ್ಕಳ ಮೇಲಿನ ಹಿಂಸೆ ವಿರುದ್ಧದ ಕಾನೂನು ಕ್ರಮಗಳಲ್ಲಿ ಗುಣಮಟ್ಟ ಕಾಪಾಡುವುದು.


- ಮಕ್ಕಳ ಮೇಲಿನ ಹಿಂಸೆ ಕುರಿತು ಪೊಲೀಸ್, ನ್ಯಾಯಾಂಗ ಅಧಿಕಾರಿಗಳು ಮತ್ತು ಕಾನೂನು ಕ್ರಮ ಜರಗಿಸುವವರಿಗೆ ಸಂವೇದನಾಶೀಲ ಕಾರ್ಯಕ್ರಮಗಳನ್ನು ಮಾಡಿ, ಮಕ್ಕಳ ವಿರುದ್ಧದ ಅಪರಾಧಗಳ ನೋಂದಣಿಯಲ್ಲಿ ಹೆಚ್ಚಳ ಮಾಡುವುದು. ರಾಯಚೂರಿನ ಪ್ರತಿ ಪೊಲೀಸ್ ಠಾಣೆಯಲ್ಲೂ ಹಿಂಸೆಯ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವಂತಹ, ತರಬೇತಿ ಪಡೆದ ಸಿಬ್ಬಂದಿ. ಕಾನೂನು ಕ್ರಮ ಜರಗಿಸುವಂತೆ ಮಾಡಿ ಅಭಿವೃದ್ಧಿಶೀಲ ವಕ್ತಾರರ {ಪೊಲೀಸ್, ಕಾರ್ಮಿಕ, ನ್ಯಾಯಾಂಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ ಇಲಾಖೆಗಳು, ಜಿಲ್ಲಾ ಪಂಚಾಯ್ತಿ, ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ (NGO's} ಮತ್ತು ಇತರರು ನಡುವೆ ಸಂಪರ್ಕ ಮತ್ತು ಸಂಯೋಜನೆಯನ್ನು ಕಲ್ಪಿಸುವುದು.

- ರೋಗ ಪ್ರತಿಬಂಧಕ ಚುಚ್ಚುಮದ್ದು ಕುರಿತು ಜಾಗೃತಿ ಮತ್ತು ಅದನ್ನು ಪಡೆಯುವುದು, ಸ್ವಚ್ಛತೆ ಮತ್ತು ಆರೋಗ್ಯ ಪಾಲನೆಗಾಗಿ ಸುರಕ್ಷಿತ ತಾಯ್ತನ. ಸ್ವಚ್ಛತೆಯ ಮಾದರಿ ರೀತಿಗಳು, ರೋಗ ಪ್ರತಿಬಂಧಕ ಚುಚ್ಚುಮದ್ದಿನ ಉಪಯೋಗದಲ್ಲಿ ಮತ್ತು ಸುರಕ್ಷಿತ ತಾಯ್ತನದಲ್ಲಿ 70% ಹೆಚ್ಚಳ.

- ರಾಯಚೂರಿನ ಒಳಗೆ ಅಥವಾ ಹೊರಗೆ ವಾಣಿಜ್ಯ ಆಥವಾ ಲೈಂಗಿಕೋದ್ದೇಶಕ್ಕಾಗಿ ಮಕ್ಕಳನ್ನು ಬಳಸುವುದರ ಮೇಲ್ವಿಚಾರಣೆ ಸೇರಿದಂತೆ ಅಪಾಯಕಾರಿ ಕ್ಷೇತ್ರಗಳು ಮತ್ತು ಹತ್ತಿ ಬೀಜ, ಹೊಗೆಸೊಪ್ಪು, ಮೆಣಸು ಸೇರಿದಂತೆ ಕೃಷಿ ಕ್ಷೇತ್ರಗಳಿಗೆ ವಿಶೇಷ ಆದ್ಯತೆ ಕೊಟ್ಟು ರಾಯಚೂರು ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆ ಮಾಡುವುದು.

- ಮಕ್ಕಳ ಹಕ್ಕುಗಳನ್ನು ಸಾಧಿಸಲು ಸಂಪನ್ಮೂಲಗಳ ಸಂತುಲಿತ ಮತ್ತು ಸಮರ್ಪಕವಾಗಿ ಉಪಯೋಗವಾಗುವಂತಹ ಮುಖ್ಯ ಇಲಾಖೆಗಳು, ಎನ್‌ಜಿಒ-ಸಿಬಿಒ ಒಕ್ಕೂಟಗಳು, ಮಹಿಳಾ ಮತ್ತು ಮಕ್ಕಳ ಗುಂಪುಗಳ ನಡುವಿನ ಸಮನ್ವಯತೆಗೆ ಪ್ರೋತ್ಸಾಹಿಸುವುದು ಮತ್ತು ಬಲಪಡಿಸುವುದು. ಪ್ರಗತಿ ಪರಿಶೀಲನೆ ಮತ್ತು ಅಗತ್ಯವಿದ್ದಲ್ಲಿ ಕಾರ್ಯಕ್ರಮಗಳಲ್ಲಿ ತಿದ್ದುಪಡಿಗಳಿಗೆ ಕ್ರಮ.





## ಕಾರ್ಯತಂತ್ರಗಳು

- ಮಕ್ಕಳ ರಕ್ಷಣಾ ವಿಚಾರಗಳು ಈಗ ಅಸ್ತಿತ್ವದಲ್ಲಿರುವ ಇಲಾಖಾ ಮತ್ತು ಎನ್ ಜಿ ಒ ಕಾರ್ಯಕ್ರಮಗಳೊಂದಿಗೆ ಇಲಾಖಾ ಕಾರ್ಯಕ್ರಮಗಳ ಭಾಗವನ್ನಾಗಿಸುವುದು. ಈಗಿರುವ ಕಾರ್ಯಕ್ರಮಗಳಿಗೆ ಮಕ್ಕಳ ರಕ್ಷಣಾ ಸೂಚಕಗಳನ್ನು ತಯಾರಿಸಿ ಮೇಲ್ವಿಚಾರಣೆ ಮಾಡುವ ಮೂಲಕ ಇದನ್ನು ಅಳವಡಿಸಲಾಗುವುದು. ಇದರೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೊಲೀಸ್, ಕಾರ್ಮಿಕ, ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು, ನ್ಯಾಯಾಂಗ ಮತ್ತು ಮುಖ್ಯವಾಗಿ ಪಂಚಾಯ್ತಿ ರಾಜ್ ಇಲಾಖೆಗಳನ್ನು ಒಳಪಡಿಸಿ ಅವರಿಗೆ ಜಾಗೃತಿ ಮತ್ತು ವಕಾಲತ್ತು (Advocacy) ಕಾರ್ಯಕ್ರಮಗಳನ್ನು ಸಂಘಟಿಸಲಾಗುವುದು.

- ವಿವಿಧ ಹಂತಗಳಲ್ಲಿ ಮಕ್ಕಳ ರಕ್ಷಣೆ ವಿಚಾರಗಳಿಗೆ ಸ್ಪಂದಿಸಲು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕಾವಲು ಸಮಿತಿಗಳು, ನೆರೆಹೊರೆ ಗುಂಪುಗಳು, ಯುವಕ ಗುಂಪುಗಳು, ಸಹಾಯವಾಣಿಗಳು ಸೇರಿದಂತೆ ಸೂಕ್ತ ವ್ಯವಸ್ಥೆಗಳ ಸ್ಥಾಪನೆ ಮತ್ತು ಬಲಪಡಿಸುವಿಕೆ. ರಾಜ್ಯ ಮಟ್ಟದ ಮಕ್ಕಳ ಸಂರಕ್ಷಣಾ ಘಟಕದೊಂದಿಗೆ ಸಂಪರ್ಕ ಸ್ಥಾಪಿಸುವುದು.

- ಅಪಾಯದ ಅಂಚಿನಲ್ಲಿರುವ ಮಕ್ಕಳು ಮತ್ತು ಯುವಕರಿಗೆ ಪಂಚಾಯ್ತಿ / ವಾರ್ಡ್‌ವಾರು ಮೂಲ ಮಾಹಿತಿ (ಬಾಲಕಾರ್ಮಿಕತೆ, ಬೀದಿ ಮತ್ತು ಓಡಿಬಂದ ಮಕ್ಕಳು, ಬಾಲ್ಯವಿವಾಹ



ಮುಂತಾದವು) ಗುರುತಿಸಿ, ಪಾಲಿಸಿಕೊಳ್ಳುವುದು. ಡಿಪಿಪಿ ಯೋಜನೆಯ ಪ್ರಗತಿ ಬಗ್ಗೆ ವರದಿ ಮತ್ತು ಪರಿಶೀಲನೆ ಸಂದರ್ಭದಲ್ಲಿ ಈ ಮಾಹಿತಿಯನ್ನು ಅವಲೋಕನ ಮಾಡಲಾಗುತ್ತದೆ. ಮಕ್ಕಳ ಮುಖ್ಯ ಪ್ರಗತಿ ಸೂಚಕಗಳನ್ನು ಗ್ರಾಮ / ವಾರ್ಡ್ ಆಧಾರಿತ ಮೇಲ್ವಿಚಾರಣೆಗಾಗಿ ಸಮುದಾಯ ದಾಖಲೆ ಇಟ್ಟುಕೊಳ್ಳುವುದು.

- ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ, ಕನಿಷ್ಠ ವೇತನ ಕಾಯ್ದೆ, ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2006, ಅನೈತಿಕ ವ್ಯವಹಾರ ತಡೆ ಕಾಯ್ದೆ, ಬಾಲ್ಯವಿವಾಹ ನಿರ್ಮೂಲನಾ ಕಾಯ್ದೆ 2006, ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯ್ದೆಗಳ ಮೂಲಕ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲ ವಿಚಾರಗಳಲ್ಲೂ ಸಾಂದರ್ಭಿಕವಾದ ಮತ್ತು ಪರಿಣಾಮಕಾರಿಯಾದ ಕಾನೂನು ಕ್ರಮ.

- ಭಾರತ ಸರ್ಕಾರದ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ (ICPS) ಯಲ್ಲಿ ಸೂಚಿಸಿದಂತೆ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕವನ್ನು ಸ್ಥಾಪಿಸುವುದು. (DCPU) ಈ ಘಟಕದ ಮೂಲಕ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಯೋಜನೆ, ಸೇವೆ, ಪ್ರಗತಿ ಮತ್ತು ಪರಿಶೀಲನೆಗಳನ್ನು ನಡೆಸುವುದು. ಈ ಘಟಕವನ್ನು ಜಿಲ್ಲಾ ಮಟ್ಟದಲ್ಲಿ ಅನುಭವಿ ಪರಿಣತ ಅಧಿಕಾರಿ ಮುಖಾಂತರ ಅನುಷ್ಠಾನಗೊಳಿಸಿ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ ಮತ್ತು ಜಿಲ್ಲಾಡಳಿತ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮುಖಾಂತರ ಜಾರಿಗೊಳಿಸುವುದು.

- ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2006ರ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಿ ಈ ಕಾಯ್ದೆಯ ಅನುಷ್ಠಾನ ವ್ಯವಸ್ಥೆಯನ್ನು ಬಲಪಡಿಸುವುದು ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಇತರ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿಟ್ಟು ಮಕ್ಕಳ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿ ಬಲಪಡಿಸಿ, ಸಂಪರ್ಕ ಜಾಲವನ್ನು ವ್ಯವಸ್ಥೆಗೊಳಿಸುವುದು. ಮಕ್ಕಳ ಸೂಕ್ತ ಪುನರ್ವಸತಿ, ಯೋಜನೆಗಳ ಅನುಷ್ಠಾನ, ಮಕ್ಕಳ ಸೇವೆ, ಪ್ರಕರಣಗಳ ಶೀಘ್ರ ವಿಲೇವಾರಿ, ಮಕ್ಕಳ ಪಾಲನೆ ಮತ್ತು ಪೋಷಣೆ ಕೇಂದ್ರಗಳಲ್ಲಿ ಸೂಕ್ತ ಕನಿಷ್ಟ ಮಾನದಂಡ ತಯಾರಿಸಿ ಶೋಷಣೆ ದೌರ್ಜನ್ಯವನ್ನು ತಡೆಗಟ್ಟಿ ಸೂಕ್ತ ವಾತಾವರಣ ನಿರ್ಮಾಣ ಮಾಡುವುದು ಮತ್ತು ಸೂಕ್ತ ಕ್ರಮಕ್ಕೆ ಮುಂದಾಗುವುದು. ಕಳೆದು ಹೋದ ಹಾಗೂ ಪೋಷಣೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳ ಅಂಕಿಸಂಖ್ಯೆಗಳ ಮಾಹಿತಿ ಸಂಗ್ರಹ ಪರ್ಯಾಯ ಸೌಲಭ್ಯಕ್ಕೆ ವ್ಯವಸ್ಥೆ.


- ಮಕ್ಕಳ ಹಕ್ಕುಗಳು, ರಕ್ಷಣೆಯ ಸೂಚಕಗಳು ಮತ್ತು ಪ್ರಗತಿ ಪರಿಶೀಲನೆ ಕುರಿತು ವಿವಿಧ ಭಾಗಿದಾರರಿಗೆ ಸಾಮರ್ಥ್ಯ ನಿರ್ಮಾಣ. ಭಾಗಿದಾರರು ಸಂಬಂಧಿಸಿದ ಇಲಾಖೆಗಳು, ವಿಧಾನಸಭಾ ಸದಸ್ಯರು, ಜನಪ್ರತಿನಿಧಿಗಳು, ಸಮುದಾಯ ಸಂಘಟನೆಗಳು (CBO's), ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು (CWC), ಮಕ್ಕಳ ನ್ಯಾಯ ಮಂಡಳಿ ಸದಸ್ಯರು (JJB) ಸಹಾಯವಾಣಿ ಸದಸ್ಯರು, ಎಟಿಸಿ (ATC)



ಎಲ್ಲಾ ಮೂರು ಹಂತದ (ಗ್ರಾಮ, ತಾಲ್ಲೂಕು, ಜಿಲ್ಲಾ) ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ ಸದಸ್ಯರು, ಗ್ರಾಮ ಪಂಚಾಯ್ತಿ ಕಾವಲು ಸಮಿತಿ ಸದಸ್ಯರು, ನ್ಯಾಯಾಂಗ ಅಧಿಕಾರಿಗಳು, ವಕೀಲರು, ಟ್ರೇಡ್ ಯೂನಿಯನ್ ಸದಸ್ಯರು, ಪತ್ರಕರ್ತರು ಮತ್ತು ಮಾಲೀಕರುಗಳಿಗೆ ಮಕ್ಕಳ ರಕ್ಷಣೆ ವಿಚಾರದಲ್ಲಿ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ಪ್ರತಿ ಗುಂಪಿಗೆ ಜಾಗೃತಿ ಉಂಟುಮಾಡುವುದು ಮತ್ತು ಸಮನ್ವಯತೆಯನ್ನು ಸಾಧಿಸುವುದು.

- ಸುರಕ್ಷಿತ ವಾತಾವರಣ ಹೆಚ್ಚಿಸುವಲ್ಲಿ ಯುವಕರು ಮತ್ತು ಮಕ್ಕಳ ಭಾಗವಹಿಸುವಿಕೆ: ಯುವಕರು ಮಕ್ಕಳ ರಕ್ಷಣೆ ಕುರಿತ ಉಪಯುಕ್ತ ಮಾಹಿತಿ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುವ ನಿಟ್ಟಿನಲ್ಲಿ ಸಾಮರ್ಥ್ಯ ಬೆಳೆಸಬಹುದಾದ ಮಕ್ಕಳ ಮತ್ತು ಯುವಕರ ವೇದಿಕೆಗಳು ಮತ್ತು ಒಕ್ಕೂಟಗಳನ್ನು ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು. (ಕಿಶೋರಿ ಮತ್ತು ಯುವಕರ ಸಂಘಗಳು, ಮಕ್ಕಳ ಹಕ್ಕುಗಳ ಕ್ಲಬ್‌ಗಳು (CRC), ಮಕ್ಕಳ ವೇದಿಕೆಗಳು, ವಸತಿನಿಲಯಗಳಲ್ಲಿನ ಗೃಹ ಸಮಿತಿಗಳು ಒಳಗೊಂಡಂತೆ)
- ಎಲ್ಲಾ ಮೇಲ್ವಿಚಾರಣೆ ಮತ್ತು ಪರಿಶೀಲನಾ ಪ್ರಕ್ರಿಯೆಗಳಿಗೆ ತಳಹದಿ ಎಂಬಂತೆ ಭಾರತ ಸರ್ಕಾರ ಯುನಿಸೆಫ್‌ನೊಂದಿಗೆ ತಯಾರಿಸಿದ 15 ಸೂಚಕಗಳ (ಅನುಬಂಧ–1 ನೋಡಿ) ಕುರಿತು ತಿಂಗಳಿಗೊಮ್ಮೆ ಗ್ರಾಮ ಪಂಚಾಯ್ತಿಗಳ ಮಟ್ಟದಲ್ಲಿ ವರದಿ ತಯಾರಿಸಿ ಎಲ್ಲ ಸಂಬಂಧಿತ ಪಾಲುದಾರರಿಗೂ ಹಂಚುವುದು ಮತ್ತು ಸೂಕ್ತ ಕ್ರಮ.
- ಆಂದೋಲನ, ಮಾಧ್ಯಮ ಬಾಂಧವ್ಯ, ಪ್ರಸಾರ ಸಾಮಗ್ರಿಗಳ ಉಪಯೋಗ ಮೂಲಕ ಜಿಲ್ಲೆಯಲ್ಲಿ ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುವಂತಹ ವಾತಾವರಣ ನಿರ್ಮಾಣ ಮಾಡುವುದು.
- ದಾಖಲೀಕರಣ ಮತ್ತು ಕಲಿಕೆಯ ಪ್ರಚಾರ.





## ನಿರೀಕ್ಷಿತ ಫಲಿತಾಂಶಗಳು

| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| 1 | ರಾಯಚೂರಿನ ಎಲ್ಲ ತಾಲ್ಲೂಕುಗಳಲ್ಲಿ ಮಕ್ಕಳಿಗೆ ಅಗತ್ಯವಾದ ರಕ್ಷಣಾ ವಿಚಾರಗಳನ್ನು ಪತ್ತೆ ಹಚ್ಚಿ, ಕರ್ನಾಟಕ ಸರ್ಕಾರ / ಜಿಲ್ಲಾ ಪಂಚಾಯ್ತಿ / ಮಹಿಳಾ ಸಂಘ / ಯುವಕ ಸಂಘ / ಒಕ್ಕೂಟಗಳು / ಎನ್‌ಜಿಓಗಳು ಇವರೊಂದಿಗೆ ಹಂಚಿಕೊಂಡು, ಬಾಲ್ಯವಿವಾಹ, ಬಾಲಕಾರ್ಮಿಕತೆ, ಬೀದಿ ಮಕ್ಕಳು, ಓಡಿಬಂದ ಮಕ್ಕಳು, ಹೆಚ್‌ಐವಿ/ಏಡ್ಸ್ ಬಾಧಿತ ಮಕ್ಕಳು ಮುಂತಾದ ವಿಚಾರಗಳ ಬಗ್ಗೆ ಕ್ರಮ ಜರಗುತ್ತಿರುತ್ತವೆ. (ಪ್ರಾರಂಭದ ಹಂತದಲ್ಲಿ ರಾಯಚೂರು ತಾಲ್ಲೂಕು ಮಾತ್ರ ಕೇಂದ್ರೀಕರಿಸಲಾಗುವುದು.) | ◆ ರಾಯಚೂರಿನ ಎಲ್ಲ ಗ್ರಾಮಗಳಲ್ಲಿ ಮತ್ತು ವಾರ್ಡ್‌ಗಳಲ್ಲಿ 15 ಸೂಚಕಗಳ ಕುರಿತಂತೆ ಗ್ರಾಮ ಪಂಚಾಯ್ತಿಗಳು / ಸ್ವಯಂ ಸೇವಾ ಸಂಸ್ಥೆ (ಎನ್‌ಜಿಓ) ಗಳಿಂದ ವಿವಿಧ ಹಂತಗಳಲ್ಲಿ ಸಮೀಕ್ಷೆ. ಮಾಹಿತಿಯ ಪರಿಶೀಲನೆ, ಪರಿವರ್ತನೆ. (ಪ್ರಸ್ತುತ ಇಲಾಖೆಗಳಿಂದ ಮತ್ತು ಅಧಿಕಾರಿಗಳಿಂದ ನಡೆಯುತ್ತಿರುತ್ತವೆ).<br>◆ ಮಕ್ಕಳಿಗೆ ಎದುರಾಗುತ್ತಿರುವ ಅಪಾಯಗಳನ್ನು ಪರಿಹರಿಸಲು ತೆಗೆದುಕೊಳ್ಳುವ ಕ್ರಮಗಳನ್ನು ಇಲಾಖೆಗಳು, ಜಿಲ್ಲಾ ಪಂಚಾಯ್ತಿ / ಸಂಬಂಧಿಸಿದ ವ್ಯಕ್ತಿಗಳು ಸುಗಮಗೊಳಿಸುವ ಮೂಲಕ ಸಂಬಂಧಿಸಿದ ಅಧಿಕಾರಿಗಳು, ಗೃಹಸಮಿತಿಗಳು ಮತ್ತು ಎನ್‌ಜಿಓಗಳೊಂದಿಗೆ ವರ್ಷಕ್ಕೆ ಕನಿಷ್ಠ ಎರಡು ಪರಿಶೀಲನಾ ಸಭೆಗಳು ನಡೆಯುವುದು. |




| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| 2 | 2012 ಇಸವಿಯಲ್ಲಿ ಬಾಲ್ಯವಿವಾಹಗಳು 75% ಕಡಿಮೆಯಾಗಿರುತ್ತದೆ. | ◆ 100% ಜನನ ಪ್ರಮಾಣ ಪತ್ರದೊಂದಿಗೆ ಜನನ ನೋಂದಣಿ.<br>◆ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ವಿವಾಹಗಳ ನೋಂದಣಿ 50% ಏರಿಕೆ.<br>◆ ಎಲ್ಲ ಸಾಮೂಹಿಕ ವಿವಾಹಗಳು ನೋಂದಾಯಿಸಲ್ಪಟ್ಟು ಸಂಬಂಧಿಸಿದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯುವುದು.<br>◆ ಮಕ್ಕಳ ಹಕ್ಕು ಉಲ್ಲಂಘನೆ ಪ್ರಕರಣಗಳಲ್ಲಿ (ಬಾಲ್ಯವಿವಾಹ ಮತ್ತು ಸಾಗಾಣಿಕೆ) ತಪಾಸಣೆ, ಪ್ರಕರಣ ದಾಖಲೀಕರಣ ಹಾಗೂ ಸಜೆಯಲ್ಲಿ 75% ಏರಿಕೆ.<br>◆ ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಮತ್ತು ಅದರ ಪರಿಣಾಮಗಳ ಕುರಿತು ಎಲ್ಲ ಧರ್ಮಗುರುಗಳಿಗೂ ತರಬೇತಿ.<br>◆ ಮಕ್ಕಳ ಹಕ್ಕುಗಳ ಕುರಿತು ಧಾರ್ಮಿಕ ಮುಖಂಡರೊಂದಿಗೆ ಪೊಲೀಸ್ ಮತ್ತು ಎನ್ ಜಿ ಓ ಗಳ ಸಂಯೋಜನೆಯಲ್ಲಿ ಮಾತುಕತೆ. |
| 3 | ಶಾಲೆಗಳಲ್ಲಿ 14 ವರ್ಷದೊಳಗಿನ ಮಕ್ಕಳ, ವಿಶೇಷವಾಗಿ ಹೆಣ್ಣು ಮಕ್ಕಳ 100% ದಾಖಲಾತಿ ಮತ್ತು ಹಾಜರಾತಿ. | ◆ 100% ದಾಖಲಾತಿ ಮತ್ತು ಹಿರಿಯ ಪ್ರಾಥಮಿಕ ಶಾಲಾ ಹಂತ ಪೂರ್ಣಗೊಳ್ಳುವವರೆಗೆ 90% ಹಾಜರಾತಿ.<br>◆ ಗುಣಮಟ್ಟದ ಶಿಕ್ಷಣ, ಶಾಲಾ ರಕ್ಷಣೆ ಮಾನದಂಡಗಳ ಬಗ್ಗೆ ಮಕ್ಕಳ ವಿವರ ಚಾರ್ಟ್ ಎಲ್ಲ ಶಾಲೆ ಹಾಗೂ ಗ್ರಾಮ ಪಂಚಾಯತ್‌ಗಳಲ್ಲಿ ಪ್ರದರ್ಶನ ಮತ್ತು ಜಾರಿ. |



| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| | | ◆ ಗ್ರಾ.ಪಂ.ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC) ಮತ್ತು ಗ್ರಾಮ ಪಂಚಾಯ್ತಿ ಕಾವಲು ಸಮಿತಿಗಳು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಶಾಲೆಯ ಮಕ್ಕಳ ಕಲಿಕಾ ಫಲಿತಾಂಶಗಳನ್ನು ಮೇಲ್ವಿಚಾರಣೆ ಮಾಡುವುದು.<br>◆ ಜಿಲ್ಲೆಯಲ್ಲಿ **"ಮಕ್ಕಳ ಹಕ್ಕುಗಳ ಕ್ಲಬ್"**ಗಳನ್ನು ಹಂತ ಹಂತವಾಗಿ ಸ್ಥಾಪಿಸುವುದು ಮತ್ತು ಬಲಪಡಿಸುವುದು.<br>◆ ಶಾಲೆಯಲ್ಲಿ ಗೈರುಹಾಜರಿ ಇಳಿಕೆ. |
| 4 | ಪ್ರೌಢಶಾಲೆಯಲ್ಲಿ ಹೆಣ್ಣುಮಕ್ಕಳ ದಾಖಲಾತಿ ಮತ್ತು ಹಾಜರಾತಿಯಲ್ಲಿ 75 % ಏರಿಕೆ. | ◆ ಹತ್ತನೇ ತರಗತಿ ಪೂರ್ಣಗೊಳಿಸುವ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಶೇ. 75% ಹೆಚ್ಚಳ.<br>◆ ಈ ಪ್ರದೇಶದಲ್ಲಿ ಬಾಲ್ಯವಿವಾಹಗಳ ಸಂಖ್ಯೆಯಲ್ಲಿ ಶೇ. 50% ರಷ್ಟು ಇಳಿಕೆ.<br>◆ ದುಡಿಯುವ ಬಾಲಕಿಯರ ಸಂಖ್ಯೆಯಲ್ಲಿ ಶೇ. 80% ರಷ್ಟು ಇಳಿಕೆ. |
| 5 | 15 ಸೂಚ್ಯಂಕಗಳ ಆಧಾರದಲ್ಲಿ ಪಂಚಾಯ್ತಿರಾಜ್ ಸಂಸ್ಥೆಗಳ (ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಮತ್ತು ನಗರಸಭೆಗಳು) ಕಾರ್ಯಸೂಚಿಯಲ್ಲಿ ಸಾರ್ವತ್ರಿಕ ಶಿಕ್ಷಣ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಕಾಣೆಯಾದ ಮಕ್ಕಳು (ಸಾಗಾಣಿಕೆ) ವಿಷಯಗಳಿಗೆ ಒತ್ತು ಕೊಟ್ಟು ಚರ್ಚಿಸುವುದು. | ◆ ತಮ್ಮ ಅಭಿವೃದ್ಧಿ ಕಾರ್ಯಸೂಚಿಯಲ್ಲಿ 15 ಅಭಿವೃದ್ಧಿ ಸೂಚಕಗಳನ್ನು ಸೇರಿಸಿಕೊಳ್ಳಲು ಪಂಚಾಯ್ತಿ ರಾಜ್ ಇಲಾಖೆಯಿಂದ ಸುತ್ತೋಲೆ.<br>◆ ಕಳುಹಿಸಿದ ವರದಿಗಳು ಮತ್ತು ಅದಕ್ಕೆ ತಾಲ್ಲೂಕು ಮಟ್ಟದಲ್ಲಿ ಕೈಗೊಂಡ ಕ್ರಮ ಮತ್ತು ಕಾರ್ಯಕ್ರಮಗಳು. |





| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| | | ◆ ಪಂಚಾಯ್ತಿ ಮಟ್ಟದಲ್ಲಿ ಗ್ರಾಮಸಭೆ ಮತ್ತು ಮಕ್ಕಳ ಗ್ರಾಮಸಭೆಗಳು 4 ತಿಂಗಳಿಗೊಮ್ಮೆ ಸೇರಿ, 15 ಸೂಚಕಗಳ ಪರಿಶೀಲನೆ. |
| 6 | ಪೊಲೀಸ್, ಶಿಕ್ಷಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಸಂಯೋಜನೆಯೊಂದಿಗೆ ಸಹಭಾಗಿತ್ವದ ಮೂಲಕ ಕಾನೂನಿನ ಪರಿಣಾಮಕಾರಿ ಜಾರಿ. | ◆ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ಕುರಿತು ಜಿಲ್ಲೆಯ 75% ಪೊಲೀಸ್ ಸಿಬ್ಬಂದಿಗೆ ತಿಳುವಳಿಕೆ.<br>◆ ಎಲ್ಲ ಪೊಲೀಸ್ ಠಾಣೆಗಳಲ್ಲೂ ತರಬೇತಿ ಪಡೆದ ಸಿಬ್ಬಂದಿ (ಪುರುಷ ಮತ್ತು ಮಹಿಳೆ)ಯೊಂದಿಗೆ ಮಕ್ಕಳ ಸಂರಕ್ಷಣಾ ಸಹಾಯ ಕೇಂದ್ರ ಸ್ಥಾಪನೆ.<br>◆ ಜಿಲ್ಲೆಯಲ್ಲಿ ಮಕ್ಕಳ ಮೇಲಿನ ಹಿಂಸೆ ವಿರುದ್ಧ ಪ್ರಕರಣಗಳ ದಾಖಲೆಯಲ್ಲಿ 50% ಹೆಚ್ಚಳ (ಬಾಲಕಾರ್ಮಿಕರು / ಜೀತ / ಬಾಲ್ಯವಿವಾಹ / ಸಾಗಾಣಿಕೆ ಸೇರಿದಂತೆ).<br>◆ ಕಾಣೆಯಾದ ಮಕ್ಕಳ ಪ್ರಕರಣಗಳ ನೋಂದಣಿಯಲ್ಲಿ 75% ಹೆಚ್ಚಳ ಮತ್ತು ಅವುಗಳ ಅನುಸರಣೆ ಹಾಗೂ ಕ್ರಮ.<br>◆ ಶಿಷ್ಟಾಚಾರ ಮತ್ತು ಮೇಲ್ವಿಚಾರಣೆ ಸೂಚಕಗಳನ್ನು ಅಭಿವೃದ್ಧಿಪಡಿಸುವುದು (ಸ್ಪಾರ್ಕ್ Spark ಪಟ್ಟಿಯಲ್ಲಿರುವಂತೆ) ಮತ್ತು ಪ್ರತಿ ಪೊಲೀಸ್ ಠಾಣೆಯಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ನಿಯಮಿತವಾಗಿ ಪರಿಶೀಲನೆ ಮಾಡುವುದು.<br>◆ ಜನಸ್ನೇಹಿ ಪೊಲೀಸ್ ಠಾಣೆ ಕುರಿತ ಪರಿಶೀಲನೆ. |




| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| | | ◆ ರಾಯಚೂರಿನ ಪೊಲೀಸ್ ಸಿಬ್ಬಂದಿವರ್ಗಕ್ಕೆ ಮಕ್ಕಳ ರಕ್ಷಣೆ ಮತ್ತು ಸಂಬಂಧಪಟ್ಟ ವಿಚಾರಗಳ ಕುರಿತು ಜಾಗೃತಿ.<br>◆ ಜಿಲ್ಲೆಯಲ್ಲಿ ಸಕ್ರಿಯವಾದ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (SDMC), ಮಕ್ಕಳ ಸಾಗಾಣಿಕೆ ತಡೆ ಮತ್ತು ವಿರೋಧಿ ಸಮಿತಿ (ATC) ಮಹಿಳಾ ಮತ್ತು ಮಕ್ಕಳ ಸಹಾಯವಾಣಿಗಳು.<br>◆ ರಕ್ಷಣೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಮನ್ವಯದಿಂದ ಕೆಲಸ ನಿರ್ವಹಿಸುವ ವ್ಯವಸ್ಥೆಗಳು (ಮೇಲೆ ಸೂಚಿಸಿದಂತಹವು). |
| 7 | 2012ರೊಳಗೆ ಅಪಾಯಕಾರಿ ಕ್ಷೇತ್ರಗಳಲ್ಲಿ, ನಗರ ಕೇಂದ್ರಗಳಲ್ಲಿ ಬಾಲಕಾರ್ಮಿಕತನದ ಸಂಪೂರ್ಣ ನಿರ್ಮೂಲನೆ, ಕೃಷಿ ಕ್ಷೇತ್ರದಲ್ಲಿ 75% ನಿರ್ಮೂಲನೆ. | ◆ ಎಲ್ಲ ಗ್ರಾಮ ಪಂಚಾಯ್ತಿಗಳಲ್ಲಿ ಸಮುದಾಯ ದಾಖಲೆಗಳಿವೆ ಮತ್ತು 16 ವರ್ಷದೊಳಗಿನ ಮಕ್ಕಳ ಮಾಹಿತಿ ಇರುತ್ತದೆ. 0–18 ವರ್ಷದ ಮಕ್ಕಳ ಮಾಹಿತಿ ಪಂಚಾಯ್ತಿ ಕಛೇರಿಗಳಲ್ಲಿ ಲಭ್ಯವಿರುತ್ತದೆ.<br>◆ ಶಾಲೆಗಳು ಮತ್ತು ಎಸ್‌ಡಿಎಂಸಿಗಳು ಮಕ್ಕಳ ಸ್ಥಿತಿಗತಿ ಕುರಿತು ಪರಿಶೀಲನೆ ಮಾಡುವುದು.<br>◆ ಹತ್ತಿಬೀಜ ಕ್ಷೇತ್ರದಲ್ಲಿ ದುಡಿಯುವ ಮಕ್ಕಳು ಮತ್ತು ಗಡಿ ದಾಟುವ ಮಕ್ಕಳ ಚಲನವಲನ ನಿರೀಕ್ಷಣೆಗಾಗಿ ಅಂತರ–ರಾಜ್ಯ ಮೇಲ್ವಿಚಾರಣೆ ವ್ಯವಸ್ಥೆ ಮತ್ತು ನಿಯತಕಾಲಿಕ ಪರಿಶೀಲನೆ. |




| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| 8 | ಎಲ್ಲ ಮಕ್ಕಳ ಪೋಷಣೆ ಸಂಸ್ಥೆಗಳಲ್ಲಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ, ಎನ್‌ಸಿಎಲ್‌ಪಿ ಮತ್ತು ಖಾಸಗಿ ಸಂಸ್ಥೆಗಳು ಸೇರಿದಂತೆ) ಕನಿಷ್ಠ ಗುಣಮಟ್ಟ ಮಾನದಂಡಗಳ ಪಾಲನೆ. | ◆ ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2006ರಲ್ಲಿ ತಿಳಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಖಾಂತರ ಜಿಲ್ಲೆಯಲ್ಲಿ ನಡೆಯುತ್ತಿರುವ ಎಲ್ಲಾ ಮಕ್ಕಳ ಪೋಷಣೆ ಮತ್ತು ರಕ್ಷಣಾ ಕೇಂದ್ರಗಳ / ಸಂಸ್ಥೆಗಳ ನೋಂದಣಿ.<br>◆ ಈ ಸಂಸ್ಥೆಗಳಿಂದ ಮಕ್ಕಳು ಬಿಟ್ಟು ಹೋಗುವುದರಲ್ಲಿ ಇಳಿಕೆ.<br>◆ ಮಕ್ಕಳ ಪರ ಮನೋಭಾವ ಬೆಳಸಲು ಸಿಬ್ಬಂದಿವರ್ಗಕ್ಕೆ ಸಾಮರ್ಥ್ಯ ತರಬೇತಿ. ಅಧಿಕಾರಿಗಳ ನಡುವೆ ಅಂತರ–ಇಲಾಖಾ ಸಮನ್ವಯ. ಎಲ್ಲ ಮಕ್ಕಳ ಪೋಷಣೆ ಸಂಸ್ಥೆಗಳಲ್ಲಿ ಗುಣಮಟ್ಟ ಮಾನದಂಡಗಳ ಅಭಿವೃದ್ಧಿ, ಪಾಲನೆ ಮತ್ತು ಮೇಲ್ವಿಚಾರಣೆ. ಎಲ್ಲ ಭಾಗೀದಾರರೊಂದಿಗೆ (ಮಕ್ಕಳು ಮತ್ತು ಯುವಕರು ಸೇರಿದಂತೆ) ಚರ್ಚಿಸಿ ಶಿಷ್ಟಾಚಾರ ತಯಾರಿಸುವುದು.<br>◆ ಮಕ್ಕಳ ವೇದಿಕೆಗಳ ರಚನೆ ಮತ್ತು ಮೇಲಿನ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ.<br>◆ ಸಿಬ್ಬಂದಿ ವರ್ಗದಲ್ಲಿ ಗುಣಮಟ್ಟ ಮಾನದಂಡಗಳ ಕುರಿತು ಜಾಗೃತಿ, ಇಲಾಖೆಗಳಿಂದ, ಪಂಚಾಯ್ತಿರಾಜ್ ಸಂಸ್ಥೆಗಳಿಂದ ಮತ್ತು ಸ್ಥಳೀಯ ಸಂಘಟನೆಗಳಿಂದ ನಿಯಮಿತವಾಗಿ ಪರಿಶೀಲನೆ. |





| ಸಂ. | ಫಲಿತಾಂಶಗಳು | ಪರಿಶೀಲಿಸಬಹುದಾದ ಸೂಚಕಗಳು |
|---|---|---|
| 9 | ಮಕ್ಕಳಿಗೆ ಸಂಬಂಧಿಸಿದ ಸೂಕ್ಷ್ಮ ಹಾಗೂ ಪೋಷಣೆ ಮತ್ತು ರಕ್ಷಣೆಯ ವಿಚಾರಗಳಲ್ಲಿ ಶೇ. 75 ರಷ್ಟು ಶೀಘ್ರ ವಿಲೇವಾರಿ. | ◆ ಮಕ್ಕಳ ಕಲ್ಯಾಣ ಸಮಿತಿ (CWC), ಮಕ್ಕಳ ನ್ಯಾಯ ಮಂಡಳಿ (JJB), ಮಕ್ಕಳ ವಿಶೇಷ ಪೊಲೀಸ್ ಘಟಕ (SJPU), ಹಾಗೂ ಮಕ್ಕಳ ನ್ಯಾಯ ಕಾಯ್ದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಎಲ್ಲಾ ಸಂಸ್ಥೆಗಳ ಮೂಲಕ ಉತ್ತಮ ರೀತಿಯಲ್ಲಿ ಪ್ರಕರಣಗಳ ಶೀಘ್ರ ವಿಲೇವಾರಿ ಮತ್ತು ಸೂಕ್ತ ಪುನರ್ವಸತಿ ಕಲ್ಪಿಸುವುದು.<br><br>◆ ಮಕ್ಕಳ ಸಂರಕ್ಷಣೆ ವಿಚಾರದಲ್ಲಿ ಶೇ. 100 ರಷ್ಟು ತರಬೇತಿ ಹೊಂದಿದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು.<br><br>◆ ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಹಾಗೂ ದತ್ತು ಸ್ವೀಕಾರ ಈ ಎಲ್ಲ ಪ್ರಕರಣ ಮತ್ತು ಘಟನೆಗಳು ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಕಲ್ಯಾಣ ಸಮಿತಿ ಮತ್ತು ಮಕ್ಕಳ ನ್ಯಾಯ ಮಂಡಳಿ ಮುಖಾಂತರವೇ ಇತ್ಯರ್ಥವಾಗುತ್ತವೆ.<br><br>◆ ಮಕ್ಕಳ ನ್ಯಾಯ ಕಾಯ್ದೆಯ ಅಡಿಯಲ್ಲಿ ಬರುವ ಎಲ್ಲಾ ಪ್ರಕರಣಗಳ ಮತ್ತು ಮಕ್ಕಳ ಪುನರ್ವಸತಿ ಕುರಿತ ಅಂಕಿ ಅಂಶಗಳ ಮಾಹಿತಿ ಸ್ವಯಂಚಾಲಿತ ಗಣಕೀಕರಣ ಮೂಲಕ (JJ Automation) ಚಾಲ್ತಿಯಲ್ಲಿರುತ್ತವೆ. |





## ಸಹಭಾಗಿತ್ವದ ಕಾರ್ಯತಂತ್ರಗಳು

ಕೇಂದ್ರ ಮಟ್ಟದಿಂದ ಜಿಲ್ಲಾಮಟ್ಟದವರೆಗಿನ ಎಲ್ಲ ಮಕ್ಕಳ ಸಂರಕ್ಷಣಾ ಘಟಕಗಳು ಒಂದೇ ನೀತಿ ಮತ್ತು ಜಾಲದ ಅಡಿಯಲ್ಲಿ ಕಾರ್ಯ ನಿರ್ವಹಿಸಲಿವೆ. ಕೇಂದ್ರ, ರಾಜ್ಯ, ಜಿಲ್ಲಾ ಘಟಕಗಳ ಮುಖಾಂತರವೇ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಯೋಜನೆಯ ತಯಾರಿ, ಅನುಷ್ಠಾನ, ಪರಿಶೀಲನೆಗಳು ನಡೆಯುತ್ತವೆ. ಹೊಸ ಕಾರ್ಯತಂತ್ರಗಳನ್ನು ಮತ್ತು ಯೋಜನೆಗಳನ್ನು ಅಗತ್ಯಾನುಸಾರ ಮಾತ್ರ ಜಾರಿ ತರಲಾಗುವುದು. ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ, ಯುನಿಸೆಫ್ ಮಕ್ಕಳ ಸಂರಕ್ಷಣಾ ಘಟಕ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಸಂಘ–ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರ ಇಲಾಖೆಗಳ ಮುಖಾಂತರವೇ ಮಕ್ಕಳ ಅಭಿವೃದ್ಧಿ, ರಕ್ಷಣಾ ವಿಚಾರವನ್ನು ಕೈಗೆತ್ತಿಕೊಂಡು ಉಲ್ಲಂಘನೆ ಸಂದರ್ಭದಲ್ಲಿ ಪ್ರಕರಣ ದಾಖಲು ಮಾಡಿ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯಲಾಗುವುದು.

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ ಅಡಿಯಲ್ಲಿ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕವನ್ನು ಸ್ಥಾಪಿಸಿ ಕಾರ್ಯರೂಪಕ್ಕೆ ತರಲಾಗುವುದು.





## ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದ (DCPU)* ಕೆಲವು ಮುಖ್ಯ ಕಾರ್ಯಗಳು

- ★ ಮಕ್ಕಳ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಸ್ಥೆ, ಇಲಾಖೆ, ಸ್ವಯಂ ಸೇವಾ ಸಂಸ್ಥೆ, ಯುನಿಸೆಫ್‌ನ ಡಿಪಿಪಿ ಯೋಜನೆ ಸಹಕಾರದಿಂದ ಜಿಲ್ಲಾ ವಾರ್ಷಿಕ ಯೋಜನೆಯನ್ನು ತಯಾರಿಸುವುದು.

- ★ ಕಾಣೆಯಾದ ಮಕ್ಕಳು ಮತ್ತು ಮಕ್ಕಳ ಅಸುರಕ್ಷಿತತೆಯ ಬಗ್ಗೆ ಅಂಕಿ ಅಂಶಗಳ ಸಮೀಕ್ಷೆ ಮತ್ತು ಗರಿಷ್ಠ ಅಸುರಕ್ಷಿತ ಹಳ್ಳಿಗಳ ಪಟ್ಟಿ ತಯಾರಿ ಮಾಡಿ ಆದ್ಯತಾನುಸಾರ ಕಾರ್ಯರೂಪಕ್ಕೆ ಇಳಿಯುವುದು.

- ★ ದತ್ತು ಸ್ವೀಕಾರ, ಪೋಸ್ಟರ್ ಕೇರ್ ಮತ್ತು ಪ್ರಾಯೋಜಿತ ಕಾರ್ಯಕ್ರಮಗಳನ್ನು ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಬಲಪಡಿಸಿ ಸೂಕ್ತ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದು.

- ★ ಪರಿಣಾಮಕಾರಿಯಾಗಿ ತ್ವರಿತಗತಿಯಲ್ಲಿ ಮಕ್ಕಳ ಪ್ರಕರಣಗಳ ವಿಲೇವಾರಿ ಮಾಡಲು ಸೂಕ್ತ ಸಲಹೆ, ಸಹಕಾರ ಮತ್ತು ಸಹಭಾಗಿತ್ವ ನೀಡುವುದು. ಮುಖ್ಯವಾಗಿ ಒತ್ತಡದ ದುಡಿಮೆ, ಬಾಲಕಾರ್ಮಿಕತೆ, ಶೋಷಣೆಗೆ ಒಳಗಾದ ಮಕ್ಕಳು, ಸಾಗಾಣಿಕೆ ಮತ್ತು ಮಾರಾಟಕ್ಕೊಳಗಾದ ಮಕ್ಕಳು, ಬಾಲ್ಯವಿವಾಹಕ್ಕೆ ಒಳಗಾದ ಮಕ್ಕಳು, ಹೆಚ್‌ಐವಿ ಬಾಧಿತ ಮಕ್ಕಳು, ಪ್ರಾಕೃತಿಕ ವಿಕೋಪಕ್ಕೆ ಒಳಗಾದ ಮಕ್ಕಳು ಮತ್ತು ವಿಶೇಷ ರಕ್ಷಣೆಯ ಅಗತ್ಯವುಳ್ಳ ಮಕ್ಕಳು (ಅನಾಥ).

- ★ ಸಮಗ್ರ ಪುನರ್ವಸತಿ, ದಾಖಲಾತಿ, ಹಾಜರಾತಿ ಮತ್ತು ಪರ್ಯಾಯ ವ್ಯವಸ್ಥೆಯ ದಾರಿಗಳನ್ನು ಹುಡುಕುವುದು ಮತ್ತು ಅನುಷ್ಠಾನ ಆಗುವಂತೆ ಮಾಡುವುದು.


- ★ ಎಲ್ಲ ಮಕ್ಕಳ ರಕ್ಷಣೆ ಮತ್ತು ಪೋಷಣಾ ಕೇಂದ್ರಗಳಲ್ಲಿ ಕನಿಷ್ಟ ಮಾನದಂಡಗಳನ್ನು ಕಾಪಾಡುವಂತೆ ಮಾಡುವುದು.

- ★ ಮಕ್ಕಳಿಗೆ ಲಭ್ಯವಿರುವ ಹಾಗೂ ಇತರೆ ಸಂಪನ್ಮೂಲಗಳನ್ನು, ಸಂಸ್ಥೆಗಳು, ಸರ್ಕಾರಿ ಇಲಾಖೆಗಳ ಮುಖಾಂತರ ಸೂಕ್ತ ರೀತಿಯಲ್ಲಿ ಅನುಷ್ಠಾನವಾಗುವಂತೆ ಸಂಪರ್ಕ ಜಾಲದ ವ್ಯವಸ್ಥೆ ಹಾಗೂ ಸೂಕ್ತ ಜಾಗೃತಿಗಾಗಿ ಕ್ರಮ.

- ★ ಡಿಪಿಪಿಯ ಗುರಿ ತಲುಪಲು ಮಕ್ಕಳಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ವ್ಯಾಪಕ ಸಹಭಾಗಿತ್ವ ಮತ್ತು ಮುಖ್ಯ ಇಲಾಖೆಗಳ ಹಾಗೂ ಭಾಗೀದಾರರೊಂದಿಗೆ ಕಾರ್ಯನಿರ್ವಹಿಸುವುದು.


*DCPU ಜಿಲ್ಲಾ ಮಟ್ಟದಲ್ಲಿ ಸ್ಥಾಪನೆಯ ಹಂತದಲ್ಲಿ ಇದೆ. ICPCS & *SCPU ನಿರ್ದೇಶನದಂತೆ






## ಸಮನ್ವಯ : ಮುಖ್ಯ ಇಲಾಖೆಗಳ (ಭಾಗೀದಾರರ) ಪಾತ್ರ ಮತ್ತು ಜವಾಬ್ದಾರಿಗಳು


| ಯಾರು | ಏನು |
|---|---|
| ಜಿಲ್ಲಾಡಳಿತ | ✹ ಡಿಪಿಪಿಯ (ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ) ಅನುಷ್ಠಾನ, ಸಂಯೋಜನೆ ಮತ್ತು ಪ್ರಗತಿ ಪರಿಶೀಲನೆಯ ಸಂಪೂರ್ಣ ಜವಾಬ್ದಾರಿ.<br><br>✹ ಡಿಪಿಪಿಗೆ ಅಗತ್ಯವಾದ ಮೂಲಭೂತ ವ್ಯವಸ್ಥೆಗಳು ಮತ್ತು ಸಾಂಸ್ಥಿಕ ತಯಾರಿಗಳು ಇಲಾಖಾ ನಿಧಿ ಮತ್ತು ಚಟುವಟಿಕೆಗಳೊಂದಿಗೆ ಒಟ್ಟುಗೂಡಿಸಿ (ಅಂತರ ಇಲಾಖಾ ಸಹಭಾಗಿತ್ವ ಸೇರಿದಂತೆ) ಖಾತ್ರಿಪಡಿಸುವುದು. ಐಸಿಪಿಎಸ್ ಜಾರಿಯಾಗುವ ಸಂದರ್ಭದಲ್ಲಿ ಜಿಲ್ಲಾಡಳಿತವು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ ರಚನೆ ಮತ್ತು ಚಟುವಟಿಕೆಗಳನ್ನು ಖಾತರಿಪಡಿಸಬೇಕು.<br><br>✹ ಮಹಿಳಾ ಗುಂಪುಗಳು ಮತ್ತು ಬಾಲಕಾರ್ಮಿಕರ ಕುಟುಂಬಗಳಿಗಾಗಿ ಸಾಧ್ಯವಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಸಮನ್ವಯಿಸಿ, ಸುಗಮಗೊಳಿಸುವುದು.<br><br>✹ ಡಿಪಿಪಿಯ ನಿಯತಕಾಲಿಕ ಪ್ರಗತಿ ಪರಿಶೀಲನೆ ಎಲ್ಲ ಮಟ್ಟದ ಕೆಡಿಪಿ ಸಭೆಗಳಲ್ಲಿ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಪರಿಶೀಲನಾ ಸಭೆಗಳಲ್ಲಿ ನಡೆಸುವುದು ಮತ್ತು ಸೂಕ್ತವಾದ ನೀತಿನಿಯಮ ಹಾಗೂ ಕಾರ್ಯಕ್ರಮಗಳನ್ನು ಅವಲೋಕಿಸುವುದು |
| ಜಿಲ್ಲಾ ಪಂಚಾಯ್ತಿ | ✹ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳ ಮೂಲಕ ಡಿಪಿಪಿಯ ಜಾರಿಗೆ ಸಂಪೂರ್ಣ ಕ್ರಮ. |





| ಯಾರು | ಏನು |
| --- | --- |
| | ✸ಡಿಪಿಪಿ ಅಡಿಯಲ್ಲಿ ಬರುವ ಎಲ್ಲ ಅಂಶಗಳನ್ನೂ (ಉದಾಹರಣೆಗೆ, ರಕ್ಷಣಾ ಸೂಚ್ಯಂಕಗಳಾದ ಜನನ ನೋಂದಣಿ, 5 ವರ್ಷದೊಳಗಿನವರಿಗೆ ರೋಗ ಪ್ರತಿಬಂಧಕ ಚುಚುಮದ್ದು, ಸುರಕ್ಷಿತವಾದ ಕುಡಿಯುವ ನೀರು, ಅಯೋಡೀಕೃತ ಉಪ್ಪಿನ ಉಪಯೋಗ, ಶಾಲಾ ದಾಖಲಾತಿ, ಬಾಲಕಾರ್ಮಿಕ ಪದ್ಧತಿ ವಿರುದ್ಧ ಕಾನೂನು ಜಾರಿ ಮತ್ತು ಬಾಲ್ಯವಿವಾಹ) ಎಲ್ಲ ಕೆಡಿಪಿ ಮತ್ತು ಇತರೆ ಪರಿಶೀಲನಾ ಸಭೆಗಳಲ್ಲಿ ಮುಖ್ಯವಾದ ಕಾರ್ಯಸೂಚಿಯನ್ನಾಗಿ ಮಾಡಿ ಚರ್ಚಿಸುವುದು.<br>✸ಡಿಪಿಪಿ ಗುರಿಗಳು ಜಾರಿಗೆ ಬರುವಂತೆ ಜಿಲ್ಲಾ ಪಂಚಾಯ್ತಿಯ ವಿವಿಧ ಅಭಿವೃದ್ಧಿ ಕಾರ್ಯಗಳಡಿಯಲ್ಲಿ ಮೂಲಭೂತ ವ್ಯವಸ್ಥೆಗಳು ಮತ್ತು ಸಾಂಸ್ಥಿಕ ತಯಾರಿಗಳ ಬಗ್ಗೆ ಖಾತರಿಪಡಿಸುವುದು.<br>✸ಬಾಲಕಾರ್ಮಿಕರು, ಶಿಕ್ಷಣ, ಮಕ್ಕಳ ಚಲನವಲನ, ವಿವಾಹದ ವಯೋಮಾನ ಮುಂತಾದ ಗಂಭೀರ ಅಂಶಗಳ ಕುರಿತ ಮೂಲಭೂತ ಅಂಕಿಅಂಶ ನೀಡಲು ಮತ್ತು ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯ್ತಿ ಮಟ್ಟದ ಪರಿಶೀಲನಾ ಸಭೆಯಲ್ಲಿ ತಿಳಿಸಲು ಮಕ್ಕಳ ಮಾಹಿತಿಯನ್ನು ಗ್ರಾಮೀಣ ಮತ್ತು ಪಂಚಾಯ್ತಿ ಮಟ್ಟದಲ್ಲಿ ಸಾಮುದಾಯಿಕ ನೋಂದಣಿ ಮಾಡುವುದು.<br>✸ಮೇಲೆ ತಿಳಿಸಿದಂತಹ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ಗ್ರಾಮ ಪಂಚಾಯ್ತಿಗಳಲ್ಲಿ "ಮಕ್ಕಳ ಕಾವಲು ಸಮಿತಿ" (CRPC)ಗಳನ್ನು ರಚನೆ ಮಾಡುವುದು.<br>✸ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಶಾಲೆಗಳಿಗೆ ಹೆಣ್ಣು ಮಕ್ಕಳ ಆದ್ಯತೆ ಮೇರೆಗೆ 100% ಸ್ವಚ್ಚತೆ, ಶೌಚಾಲಯ ಮತ್ತು ನೀರು ಸರಬರಾಜು ಮಾಡುವುದು. (ನಿರ್ಮಲ ಗ್ರಾಮ ಪಂಚಾಯ್ತಿ)<br>✸ದುಡಿಮೆಯಿಂದ ಬಿಡುಗಡೆಗೊಂಡ ಮಕ್ಕಳಿಗೆ ವಸತಿನಿಲಯಗಳಲ್ಲಿ 25% ಸೀಟುಗಳನ್ನು ಕಾದಿರಿಸುವುದು ಮತ್ತು ವಸತಿನಿಲಯಗಳಿಗೆ ಆದಷ್ಟು ಸಂಪನ್ಮೂಲಗಳನ್ನು ಒದಗಿಸುವುದು. |





| ಯಾರು | ಏನು |
|---|---|
| | ✸ಮಕ್ಕಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳು ಗ್ರಾಮಸಭೆಗಳಲ್ಲಿ ಚರ್ಚಿಸಲು ಸೂಕ್ತವಾದ ವ್ಯವಸ್ಥೆಗಳನ್ನು / ಆದೇಶಗಳನ್ನು ಮಾಡುವುದು. |
| ಕಾರ್ಮಿಕ ಇಲಾಖೆ | ✸ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ನಗರ / ಗ್ರಾಮೀಣ ಪ್ರದೇಶದ ಅಪಾಯಕಾರಿ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಅವುಗಳ ಅಂಕಿಅಂಶಗಳನ್ನು ಸಂಗ್ರಹಿಸುವುದು.<br>✸ರಾಯಚೂರಿನ ರಾಷ್ಟ್ರೀಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ (NCLP) ಹಾಗೂ ರಾಜ್ಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರೀಯಾ ಯೋಜನೆ (SCLP) ಕೇಂದ್ರಗಳಿಂದ ಅಂಕಿಅಂಶಗಳನ್ನು ಒಟ್ಟುಗೂಡಿಸುವುದು ಮತ್ತು ಮಕ್ಕಳ ಪ್ರಗತಿ ಪರಿಶೀಲಿಸುವುದು.<br>✸ದುಡಿಯಲು ವಲಸೆ ಹೋಗುವ ಮಕ್ಕಳ ಸ್ಥಿತಿಗತಿಯ ಕುರಿತು ಅಧ್ಯಯನಕ್ಕೆ ಮುಂದಾಗುವುದು.<br>✸ಬಾಲಕಾರ್ಮಿಕ ಪದ್ಧತಿ (ನಿಷೇಧ & ನಿಯಂತ್ರಣ) ಕಾಯ್ದೆ, 1986, ಕನಿಷ್ಠ ವೇತನ ಕಾಯ್ದೆ, ಸರ್ವೋಚ್ಚ ನ್ಯಾಯಾಲಯ ತೀರ್ಪು, ಅಂಗಡಿ ಮತ್ತು ಮುಂಗಟ್ಟುಗಳ ಕಾಯ್ದೆ ಮುಂತಾದ ಕಾನೂನುಗಳನ್ನು ಜಾರಿ ಮಾಡುವುದು ಮತ್ತು ಮಕ್ಕಳನ್ನು ಬಿಡುಗಡೆಗೊಳಿಸುವುದು.<br>✸1986ರ ಸೆಕ್ಷನ್ 17 ರ ನಿರೀಕ್ಷಕರನ್ನು ಬಲಪಡಿಸುವುದರ ಮೂಲಕ ಹೆಚ್ಚು ಪ್ರಕರಣಗಳನ್ನು ದಾಖಲಿಸುವುದು ಮತ್ತು ಮಾಲೀಕರನ್ನು ಶಿಕ್ಷೆಗೆ ಒಳಪಡಿಸುವುದು.<br>✸ಕಾನೂನು ಜಾರಿ ಮಾಡುವ ಅಧಿಕಾರಿಗಳು ಮತ್ತು (NCLP) ಸಿಬ್ಬಂದಿ ವರ್ಗದ ಸಾಮರ್ಥ್ಯ ಹೆಚ್ಚಿಸುವುದು. |
| ಸಾರ್ವಜನಿಕ ಶಿಕ್ಷಣ ಇಲಾಖೆ / ಸರ್ವ ಶಿಕ್ಷಣ ಅಭಿಯಾನ | ✸ಜಿಲ್ಲೆಯ ಮಕ್ಕಳ ಮೂಲ ಅಂಕಿಅಂಶಗಳನ್ನು ಒಟ್ಟುಗೂಡಿಸುವುದು, ಶಾಲೆಯಿಂದ ಹೊರಗುಳಿದ ಮಕ್ಕಳ ಮತ್ತು ಬಾಲಕಾರ್ಮಿಕರ ಮಾಹಿತಿಯನ್ನು ಕಾರ್ಮಿಕ ಇಲಾಖೆಯ ಸಂಯೋಜನೆಯಲ್ಲಿ ಪರಿಶೀಲಿಸುವುದು. |



| ಯಾರು | ಏನು |
|---|---|
| | • ಮಕ್ಕಳು ಶಾಲೆ ಬಿಡುವುದು ಮತ್ತು ಮಕ್ಕಳ ದುಡಿಮೆ ತಡೆಯಲು ಜಿಲ್ಲೆಯ ಅಪಾಯಕಾರಿ ಕ್ಷೇತ್ರಗಳನ್ನು ಗುರುತಿಸುವುದು.<br>• ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ದುಡಿಮೆಯಿಂದ ಹೊರಬಂದ ಮಕ್ಕಳಿಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗೆ, ಸೇತುಬಂಧ ವಸತಿಶಾಲೆ ನಡೆಸುವುದು.<br>• ಶಾಲೆಗಳಲ್ಲಿ ದೈಹಿಕ ಶಿಕ್ಷೆಯ ಪರಿಶೀಲನೆ ಸೇರಿದಂತೆ, ರಕ್ಷಣೆ ಮತ್ತು ಸುರಕ್ಷತಾ ಮಾನದಂಡಗಳನ್ನು · ಅಭಿವೃದ್ಧಿಪಡಿಸಿ ಅನುಷ್ಠಾನಕ್ಕೆ ತರುವುದು.<br>• ಡಿಎಸ್ಇಆರ್‌ಟಿಯ ಸಹಕಾರದೊಂದಿಗೆ, ಸರ್ಕಾರ ಸುತ್ತೋಲೆ ಪ್ರಕಾರ ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ಪ್ರತಿ ಶಾಲೆಯಲ್ಲೂ (Child Rights Club) ರಚಿಸುವುದು.<br>• ವಲಸೆ ಕುಟುಂಬಗಳ ಮಕ್ಕಳಿಗಾಗಿ ಟೆಂಟ್ ಶಾಲೆಗಳು/ವಸತಿ ಶಾಲೆಗಳು ಅಥವಾ ವಿಶೇಷ ಶಾಲೆಗಳು ಸ್ಥಾಪಿಸುವುದು.<br>• ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಸೇತುಬಂಧ ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಿ ಅವರ ಸಾಮರ್ಥ್ಯ ಹೆಚ್ಚಿಸುವುದು.<br>• ಶಿಕ್ಷಕರು ಮತ್ತು ಸಂಬಂಧಿಸಿದ ಸಿಬ್ಬಂಧಿಗೆ ಕಲಿಕಾ ಸಾಮರ್ಥ್ಯ ಕುರಿತು ತರಬೇತುದಾರರ ತರಬೇತಿಗಳನ್ನು (ToT) ಸಂಘಟಿಸುವುದು.<br>• ದುಡಿಮೆಯಿಂದ ಬಿಡುಗಡೆಗೊಂಡು ಶಾಲೆಗಳಲ್ಲಿ ದಾಖಲಾದ ಮಕ್ಕಳ ನಿರಂತರ ಹಾಜರಾತಿ ಖಾತರಿಪಡಿಸಲು ಶಾಲೆಯ ಸಾಮರ್ಥ್ಯವನ್ನು ಹೆಚ್ಚಿಸುವುದು.<br>• ರಾಷ್ಟ್ರೀಯ ಹಾಗೂ ರಾಜ್ಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನಾ ಕಾರ್ಯಕ್ರಮಗಳಲ್ಲಿ (NCLP/SCLP) ಗುಣಾತ್ಮಕವಾಗಿ (ಪಠ್ಯ, ಕಲಿಕಾ ಸಾಮರ್ಥ್ಯದ ಮೌಲ್ಯಮಾಪನ, ದಾಖಲಾತಿ ಮತ್ತು ಅನುಸರಣೆ, ಹಾಗೂ BRC/CRC ಗಳ |



| ಯಾರು | ಏನು |
|---|---|
| | ಭಾಗವಹಿಸುವಿಕೆ ಮುಂತಾದ ವಿಚಾರಗಳಲ್ಲಿ) ಭಾಗವಹಿಸುವುದು.<br>✸ಶೌಚಾಲಯ ಮತ್ತು ಕುಡಿಯುವ ನೀರು ಸೇರಿದಂತೆ 100% ಶಾಲಾ ಸ್ವಚ್ಚತೆ ಏರ್ಪಡಿಸುವುದು ಮತ್ತು ಮಕ್ಕಳಲ್ಲಿ ಮಾಹಿತಿ, ಶಿಕ್ಷಣ, ಸಂವಹನ (IEC) ಮೂಲಕ ಒಳ್ಳೆಯ ಅಭ್ಯಾಸಗಳನ್ನು ಬೆಳಸುವುದು.<br>✸ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಮತ್ತು ರಕ್ಷಣೆಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸಲು ಎಸ್‌ಡಿಎಂಸಿಗಳ ಭಾಗವಹಿಸುವಿಕೆ ಬಲಪಡಿಸುವುದು.<br>✸ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ / ಕಾರ್ಮಿಕ / ಸಮಾಜ ಕಲ್ಯಾಣ ಇಲಾಖೆಗಳೊಂದಿಗೆ ಸಂಯೋಜನೆ ಮಾಡುವುದು.<br>✸10ನೇ ತರಗತಿ ತನಕ ಯಾವುದೇ ಮಕ್ಕಳು ಶಾಲೆ ಬಿಡದಂತೆ ಸೂಕ್ತ ಕ್ರಮ ಮತ್ತು ವ್ಯವಸ್ಥೆಯನ್ನು ಮಾಡುವುದು,<br>✸10 ನೇ ತರಗತಿ ತನಕ ಡಿಸೆಂಬರ್‌ವರೆಗೆ ಉಚಿತವಾಗಿ ಯಾವುದೇ ಅಡೆತಡೆ ಇಲ್ಲದೆ ಮಕ್ಕಳ ಶಾಲಾ ದಾಖಲಾತಿಗೆ ಸೂಕ್ತ ಕ್ರಮ ಕೈಗೊಳ್ಳುವುದು. |
| ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ✸ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕವನ್ನು ಸ್ಥಾಪಿಸಿ ಆ ಮೂಲಕ ಮಕ್ಕಳಿಗೆ ಸಂಬಂಧಿಸಿದ ಎಲ್ಲ ಕ್ರಮ, ಸೇವೆಗಳನ್ನು ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಸಹಾಯವಾಣಿ ಮತ್ತು ಸ್ವಯಂಸೇವಾ ಸಂಸ್ಥೆಗಳ ಮುಖಾಂತರ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br>✸ ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಎಲ್ಲ ಪ್ರಸ್ತುತ ಕ್ಷೇತ್ರಗಳನ್ನು ಸಮನ್ವಯತೆಗೆ ಅಳವಡಿಸುವುದು. ಜಿಲ್ಲಾಧಿಕಾರಿ / ಸಿಇಒ ಇವರ ಸಂಯೋಜನೆಯಲ್ಲಿ ಪೊಲೀಸ್, ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಪಂಚಾಯತ್‌ರಾಜ್ ಇಲಾಖೆಗಳೊಂದಿಗೆ ಮಕ್ಕಳ ರಕ್ಷಣಾ ವಿಚಾರಗಳನ್ನು ಸಮನ್ವಯಿಸುವುದು. ಜಿಲ್ಲಾ ಕ್ರಿಯಾ ಯೋಜನೆಯ ಪ್ರಗತಿ ಪರಿಶೀಲಿಸುವುದು. |






| ಯಾರು | ಏನು |
|---|---|
| | ✸ಜಿಲ್ಲೆಯಲ್ಲಿ 100% ಜನನ ನೋಂದಣಿ ಮತ್ತು ಜನನ ಪ್ರಮಾಣಪತ್ರಗಳ ವಿತರಣೆಗಾಗಿ ಕಂದಾಯ ಮತ್ತು ಆರೋಗ್ಯ ಇಲಾಖೆಗಳೊಂದಿಗೆ ಸಮನ್ವಯದಿಂದ ಕೆಲಸ ಮಾಡುವುದು.<br>✸ಆರೋಗ್ಯ ಕಾರ್ಯಕರ್ತೆಯರ (ANMs) ಸಂಯೋಜನೆಯಲ್ಲಿ ರೋಗ ಪ್ರತಿಬಂಧಕ ಚುಚುಮದ್ದು 100 % ಪಡೆಯಲು, 5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣವನ್ನು ಇಳಿಸಲು, ಆರೋಗ್ಯವಂತ ಮಾತೃತ್ವ ಮತ್ತು ಕೌಶಲ್ಯಪೂರ್ಣವಾದ ಹೆರಿಗೆಯನ್ನು ಪ್ರೋತ್ಸಾಹಿಸಲು ಅಂಗನವಾಡಿ ಕಾರ್ಯಕರ್ತೆಯರ ಸಾಮರ್ಥ್ಯ ಹೆಚ್ಚಿಸುವುದು.<br>✸ಗುಣಮಟ್ಟದ ಪ್ರಾಥಮಿಕ ಪೂರ್ವ ಶಿಕ್ಷಣ ಮತ್ತು ಪಾಲನೆ ಮತ್ತು (ECCE), ಸಮುದಾಯ ಸಹಭಾಗಿತ್ವದ ಬಾಲವಿಕಾಸ ಸಮಿತಿಗಳನ್ನು ಬಲಪಡಿಸುವುದು.<br>✸ಸಾಂಸ್ಥಿಕ ಸಂಸ್ಥೆಗಳಿಗೆ ಪೋಷಣೆಯ ಗುಣಮಟ್ಟದ ಮಾನದಂಡಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಕನಿಷ್ಠ 50 % ಸಂಸ್ಥೆಗಳಲ್ಲಿ ಅವುಗಳನ್ನು ಜಾರಿಗೆ ತರುವುದು.<br>✸ಗುಣಮಟ್ಟದ ಮಾನದಂಡಗಳನ್ನು ವರ್ಷಕ್ಕೆ ಕನಿಷ್ಠ ಎರಡು ಬಾರಿ ಪರಿಶೀಲಿಸುವುದು. ಎಲ್ಲ ಮಕ್ಕಳ ಪೋಷಕ ಸಂಸ್ಥೆಗಳಿಗೂ ಇದನ್ನು ಪಾಲಿಸುವಂತೆ ಮಾಡುವುದು.<br>✸ಮಕ್ಕಳ ನ್ಯಾಯ ಕಾಯ್ದೆಯ ಪರಿಣಾಮಕಾರಿ ಜಾರಿಗಾಗಿ ಮಕ್ಕಳ ಕಲ್ಯಾಣ ಸಮಿತಿ ಮತ್ತು ಬಾಲನ್ಯಾಯ ಮಂಡಳಿಗಳನ್ನು ಪೊಲೀಸ್, ಮಕ್ಕಳ ಸಹಾಯವಾಣಿ (Childline - 1098), ಎನ್‌ಜಿಒ ಮತ್ತು ಕಾರ್ಮಿಕ ಇಲಾಖೆಯೊಂದಿಗಿನ ಸಂಯೋಜನೆಯಲ್ಲಿ ಬಲಪಡಿಸುವುದು.<br>✸ಮಹಿಳಾ ಸಹಾಯವಾಣಿ ಸ್ಥಾಪಿಸುವುದು, ಸಾಂತ್ವನ ಮತ್ತು ಸಿಂಧುವಾಣಿಯ ಸಂಯೋಜನೆಯಲ್ಲಿ ಕೆಲಸ ಮಾಡುವುದು.<br>✸ಹದಿಹರೆಯದ ಹೆಣ್ಣುಮಕ್ಕಳ ಕಿಶೋರಿ ಸಂಘಗಳಿಗೆ ಸ್ವಯಂ ರಕ್ಷಣೆ, ಆತ್ಮವಿಶ್ವಾಸ, ನಾಯಕತ್ವ, ವೃತ್ತಿಪರ ಕೌಶಲ್ಯತರಬೇತಿ |



| ಯಾರು | ಏನು |
|---|---|
| | ಇಂತಹ ಕೌಶಲ್ಯಗಳು ಸ್ಥಳೀಯ ಎನ್‌ಜಿಒಗಳ ಸಹಕಾರದಲ್ಲಿ ಸ್ಥಾಪಿಸುವುದು ಮತ್ತು ಬಲಪಡಿಸುವುದು.<br>✸ಹದಿಹರೆಯದವರಿಗೆ ಐಎಫ್‌ಎ ಸರಬರಾಜು 50%, ಆರೋಗ್ಯರಕ್ಷಣೆ ಮತ್ತು ಆರೊಗ್ಯ ಶಿಕ್ಷಣ ಖಾತರಿಪಡಿಸುವುದು.<br>✸ಲೈಂಗಿಕ ದಂದೆ ಮತ್ತಿತರೆ ಉದ್ದೇಶಗಳಿಗೆ ಮಹಿಳೆಯರು ಮತ್ತು ಮಕ್ಕಳನ್ನು ಸಾಗಾಣಿಕೆ ಮಾಡುವುದನ್ನು ತಡೆಯಲು ಸಾಗಾಣಿಕೆ ವಿರೋಧೀ ಸಮಿತಿಗಳನ್ನು 3 ಹಂತದಲ್ಲಿ ರಚಿಸಿ (ATC) ತರಬೇತಿ ಮೂಲಕ ಬಲಪಡಿಸುವುದು ಮತ್ತು ಎಲ್ಲ ಮಟ್ಟದಲ್ಲೂ ಪರಿಶೀಲನೆ ನಡೆಸುವುದು.<br>✸ಸ್ತ್ರೀಶಕ್ತಿ, ಬಾಲವಿಕಾಸ ಸಮಿತಿ, ಕಿಶೋರಿ ಸಂಘ, ಎಟಿಸಿ ಮುಂತಾದ ಸಮಿತಿಗಳಿಗೆ / ಸಮುದಾಯ ಸಂಘಟನೆಗಳಿಗೆ ತರಬೇತಿ ನೀಡುವುದು ಮತ್ತು ಪರಿಶೀಲನೆ ನಡೆಸುವುದರ ಮೂಲಕ ಕನಿಷ್ಠ ಪಕ್ಷ ಶೇ. 75 % ಬಾಲ್ಯವಿವಾಹಗಳನ್ನು ತಡೆಯುವುದು.<br>✸ರಾಜ್ಯ ಮಟ್ಟದ ಮಕ್ಕಳ ಸಂರಕ್ಷಣಾ ಘಟಕದ ಸಂಯೋಜನೆಯೊಂದಿಗೆ ಜಿಲ್ಲಾ ಮಟ್ಟದ ಮಕ್ಕಳ ಸಂರಕ್ಷಣಾ ಘಟಕದ ಮುಖಾಂತರ ಸ್ವಯಂಚಾಲಿತ ಅಂಕಿ ಅಂಶ ಮತ್ತು ಮಾಹಿತಿಗಳ ಗಣಕೀಕರಣದ ಮುಖಾಂತರ ಎಲ್ಲ ಮಕ್ಕಳ ಪ್ರಕರಣಗಳ ಶೀಘ್ರ ವಿಲೇವಾರಿ ಮತ್ತು ಸೂಕ್ತ ಪುನರ್ವಸತಿ ವ್ಯವಸ್ಥೆ ಮಾಡುವುದು. |
| ಪೊಲೀಸ್ | ✸ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ಜಿಲ್ಲೆಯ ಕನಿಷ್ಠ 75 % ಪೊಲೀಸ್ ಸಿಬ್ಬಂದಿಗೆ ತಿಳುವಳಿಕೆ ನೀಡುವುದು.<br>✸ಎಲ್ಲ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಮತ್ತು ಮಕ್ಕಳ ರಕ್ಷಣಾ ಡೆಸ್ಕ್ ಸ್ಥಾಪಿಸುವುದು, ಪ್ರಥಮ ಮಾಹಿತಿ ವರದಿ (FIR) ದಾಖಲಿಸುವುದು ಮತ್ತು ಪ್ರಕರಣಗಳನ್ನು ಸಂಯಮದಿಂದ ನಿರ್ವಹಿಸುವುದು, ವಿಶೇಷವಾಗಿ, ಜನಸ್ನೇಹಿ ಪೊಲೀಸ್ ಠಾಣೆಗಳಲ್ಲಿ 'ಸ್ಪಾರ್ಕ್' ಚೆಕ್‌ಲಿಸ್ಟ್‌ನ್ನು ಪರಿಶೀಲಿಸುವುದು. |






| ಯಾರು | ಏನು |
|---|---|
| | ✸ಮಕ್ಕಳ ಸ್ನೇಹಿಯಾಗಿ ಮಕ್ಕಳ ಪ್ರಕರಣಗಳ ವಿಲೇವಾರಿ ಮಾಡಲು ಮಕ್ಕಳ ನ್ಯಾಯ ಕಾಯ್ದೆಯ ಮಕ್ಕಳ ವಿಶೇಷ ಪೊಲೀಸ್ ಘಟಕದ ಮೂಲಕ ಮಕ್ಕಳ ನ್ಯಾಯ ಕಾಯ್ದೆಯಡಿಯಲ್ಲಿ ತರಬೇತಿ ಪಡೆದ ಅನುಭವಿ ಪೊಲೀಸ್ ಅಧಿಕಾರಿಗಳನ್ನು ಪ್ರತಿ ಠಾಣೆಯಲ್ಲಿ **"ಮಕ್ಕಳ ಕಲ್ಯಾಣ ಅಧಿಕಾರಿ"**ಯನ್ನಾಗಿ ನೇಮಿಸುವುದು ಮತ್ತು ತರಬೇತಿ ನೀಡುವುದು.<br><br>✸ಮಕ್ಕಳ ಕಲ್ಯಾಣ ಸಮಿತಿ / ಮಕ್ಕಳ ನ್ಯಾಯ ಮಂಡಳಿ, ಮಕ್ಕಳ ಸಹಾಯವಾಣಿ / ಮಹಿಳಾ ಸಹಾಯವಾಣಿ ಇವರ ಸಂಯೋಜನೆಯಲ್ಲಿ ಕಾಣೆಯಾಗುವ ಮಕ್ಕಳ ಮೂಲ ಮಾಹಿತಿಗಾಗಿ ಮಾಹಿತಿ ನಿರ್ವಹಣೆ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿ ತಯಾರಿಸುವುದು, ಮತ್ತು ವೆಬ್ ಸರ್ಚ್‌ಗೆ ಅದನ್ನು ಸಂಯೋಜಿಸುವುದು.<br><br>✸ಕಾಣೆಯಾದ ಮಕ್ಕಳು, ಮಕ್ಕಳ ಮೇಲಿನ ದೌರ್ಜನ್ಯಗಳು, ಅವರ ಸಾಗಾಣಿಕೆ ಇಂತಹ ಪ್ರಕರಣಗಳನ್ನು ಪ್ರತಿ ಪೊಲೀಸ್ ಠಾಣೆ, ಉಪವಲಯ, ಎಸ್ ಪಿ ಮಟ್ಟದಲ್ಲಿ ನಿಯತಕಾಲಿಕವಾಗಿ ಪರಿಶೀಲನೆ ನಡೆಸುವುದು.<br><br>✸ಮಕ್ಕಳ ಪ್ರಕರಣಗಳನ್ನು ಪ್ರತ್ಯೇಕ ಮಾಡಿ ಅಪರಾಧಗಳ ಪಟ್ಟಿಗಳನ್ನು ತಯಾರಿಸಿ ಎಲ್ಲ ಠಾಣೆಗಳಲ್ಲೂ ಪ್ರದರ್ಶಿಸುವುದು.<br><br>✸ರೋಗ ಪ್ರತಿಬಂಧಕ ಚುಚುಮದ್ದು, ಅಯೋಡೀಕರಿಸಿದ ಉಪ್ಪಿನ ಉಪಯೋಗ, ಬಾಲಕಾರ್ಮಿಕರ ಬಿಡುಗಡೆ, ಎಟಿಸಿಗಳು, ಮಕ್ಕಳ ಕಲ್ಯಾಣ ಸಮಿತಿ / ಮಕ್ಕಳ ನ್ಯಾಯ ಮಂಡಳಿಗಳ ಬಗ್ಗೆ ಸೂಕ್ತ ಜಾಗೃತಿ ಮೂಡಿಸುವುದು.<br><br>✸ಮೇಲುಸ್ತುವಾರಿ ವ್ಯವಸ್ಥೆಗಳು ಮುಂತಾದ ರಕ್ಷಣಾ ವಿಚಾರಗಳಲ್ಲಿ ಸಂಯೋಜನೆ ಸಾಧಿಸಲು ಪೊಲೀಸ್ ಅಧಿಕಾರಿಗಳಿಗೆ ತರಬೇತಿ ನೀಡುವುದು.<br><br>✸ಬಾಲ್ಯವಿವಾಹಗಳನ್ನು ತಡೆಗಟ್ಟಲು ತಮ್ಮ ಸರಹದ್ದಿನಲ್ಲಿ ನಡೆಯುವಂತಹ ಸಾಮೂಹಿಕ ಮದುವೆಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು |




| ಯಾರು | ಏನು |
|---|---|
| | ಮಹಿಳೆಯರು ಮತ್ತು ಹಳ್ಳಿ / ವಾರ್ಡ್‌ಗಳಲ್ಲಿ ನಡೆಯುವ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ವರದಿ ಮಾಡುವುದು.<br>✸ಆರೋಗ್ಯ ಮತ್ತು ರಕ್ಷಣೆಗೆ ಸಂಬಂಧಿಸಿದ ತುರ್ತು ಪರಿಸ್ಥಿತಿಯಲ್ಲಿ ತುರ್ತು ಸಂದೇಶ ನೀಡಲು ಮುಂದಾಗುವುದು. |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ✸ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಕಂದಾಯ ಇಲಾಖೆಗಳ ಸಂಯೋಜನೆಯಲ್ಲಿ ಜನನ ನೋಂದಣಿ 100% ತಲುಪುವಂತೆ ಮಾಡುವುದು.<br>✸ಜಿಲ್ಲೆಯ ಮಕ್ಕಳ ರೋಗ ಪ್ರತಿಬಂಧಕ ಚುಚ್ಚುಮದ್ದು ಹಾಗೂ ಇತರ ಲಸಿಕೆಯನ್ನು 100% ಮಾಡಲು ಪ್ರಯತ್ನಿಸುವುದು.<br>✸ಶಿಶು ಮರಣ ಪ್ರಮಾಣ (IMR) ಪರಿಣಾಮಕಾರಿಯಾಗಿ ಕಡಿಮೆಗೊಳಿಸಲು ತರಬೇತಿ ಹೊಂದಿದ ದಾದಿಯರಿಂದ ಹೆರಿಗೆಗಳು 100 % ರಷ್ಟು ತಲುಪಿಸುವುದು.<br>✸ಮಕ್ಕಳ ಮತ್ತು ಮಹಿಳೆಯರ ಆರೋಗ್ಯದಲ್ಲಿನ ಪ್ರಗತಿಯನ್ನು ಪರಿಶೀಲಿಸಲು ಹಳ್ಳಿ ಮತ್ತು ಪಂಚಾಯ್ತಿ ಮಟ್ಟದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳನ್ನು ಸಕ್ರಿಯಗೊಳಿಸುವುದು.<br>✸ಎಲ್ಲ ಶಾಲೆಗಳು, ಸೇತುಬಂಧ ಕೇಂದ್ರಗಳು ಮತ್ತು ಸಂಸ್ಥೆಗಳಲ್ಲಿ ಮಕ್ಕಳ ಆರೋಗ್ಯ ತಪಾಸಣೆ ನಿಯಮಿತವಾಗಿ ಮಾಡುವುದು ಮತ್ತು ಎಲ್ಲ ಮಕ್ಕಳಿಗೂ ಆರೋಗ್ಯ ಕಾರ್ಡ್ ಒದಗಿಸುವುದು.<br>✸ಕೆಲಸದಿಂದ ಬಿಡುಗಡೆಗೊಂಡ ಮಕ್ಕಳಿಗೆ ವಯೋಮಾನ ದೃಢೀಕರಣಪತ್ರ ನೀಡಲು ದಾಳಿ ತಂಡದಲ್ಲಿ ಭಾಗವಹಿಸುವುದು.<br>✸ ಬಾಲ್ಯ ವಿವಾಹ ತಡೆಗಟ್ಟಲು ಜನನ ಹಾಗೂ ವಯಸ್ಸಿನ ದೃಢೀಕರಣ ಪತ್ರ ನೀಡುವಲ್ಲಿ ಕಾಲಕಾಲಕ್ಕೆ ಸೂಕ್ತ ಪರಿಶೀಲನೆ ನಡೆಸುವುದು.<br>✸ಹದಿಹರೆಯದವರಿಗೆ ಐಎಫ್‌ಎ ವಿತರಣೆ ಕನಿಷ್ಠ 75% ವರೆಗೆ ಮಾಡುವುದು ಮತ್ತು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH), ಹೆಚ್‌ಐವಿ/ಏಡ್ಸ್ ಸೇರಿದಂತೆ ಆರೋಗ್ಯ ಶಿಕ್ಷಣ ನೀಡುವುದು. |






| ಯಾರು | ಏನು |
|---|---|
| ಸಮಾಜ ಕಲ್ಯಾಣ/ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ | ❋ದಾಖಲಾತಿ ಸುಗಮಗೊಳಿಸಲು ಮತ್ತು ಶಾಲೆ ಬಿಡುವುದನ್ನು ತಡೆಯಲು ವಸತಿನಿಲಯಗಳು ಮೇ ತಿಂಗಳಲ್ಲಿಯೇ ಪ್ರಾರಂಭವಾಗುವಂತೆ ನೀತಿಯಲ್ಲಿ ಬದಲಾವಣೆಗೆ ಪ್ರಯತ್ನಿಸುವುದು.<br>❋ಹೆಚ್ಚಿನ ಶಿಕ್ಷಣ ಮುಂದುವರಿಸಲು, ಪ್ರೋತ್ಸಾಹಿಸಲು ಮಕ್ಕಳಿಗೆ ವಿಳಂಬವಿಲ್ಲದೆ ವಿದ್ಯಾರ್ಥಿ ವೇತನ ನೀಡುವುದು.<br>❋ಬಾಲಕಾರ್ಮಿಕರು, ಸಾಗಣೆಗೊಳಗಾದ ಮಕ್ಕಳು ಮತ್ತು ಬಾಲ್ಯವಿವಾಹದಿಂದ ರಕ್ಷಿಸಲ್ಪಟ್ಟ ಹೆಣ್ಣುಮಕ್ಕಳ ಕುಟುಂಬಗಳಿಗೆ ಆದ್ಯತೆ ಮೇರೆಗೆ ಸಾಲ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವುದು.<br>❋ಗುಣಮಟ್ಟದ ಮಾನದಂಡಗಳನ್ನು ಪಾಲಿಸುವುದು ಮತ್ತು ಎನ್‌ಜಿಒಗಳು, ಮಕ್ಕಳು ಮತ್ತು ಇಲಾಖೆಯವರ ಪ್ರತಿನಿಧಿಗಳನ್ನು ಸೇರಿಸಿ ವಸತಿನಿಲಯಗಳಲ್ಲಿ ಗೃಹ ಸಮಿತಿಗಳನ್ನು ರಚಿಸುವುದು.<br>❋ಬಾಲ ಕಾರ್ಮಿಕತೆಯಿಂದ ಪುನರ್ವಸತಿ ಹೊಂದಿದ ಹಾಗೂ ಬಾಲಕಾರ್ಮಿಕ ಪುನರ್ವಸತಿ ವಿಶೇಷ ಕೇಂದ್ರಗಳಿಂದ ಬಂದ ಮಕ್ಕಳಿಗೆ ವಸತಿ ನಿಲಯಗಳಲ್ಲಿ ಶೇ.25 ರಷ್ಟು ಅವಕಾಶ ನೀಡಿ ಅವರಿಗೆ ವಿಶೇಷ ಕಲಿಕೆಗೆ ವ್ಯವಸ್ಥೆ ಕಲ್ಪಿಸುವುದು. |
| ನಗರಪಾಲಿಕೆ/ ನಗರಸಭೆಗಳು | ❋ ಆರೋಗ್ಯ, ಶಿಕ್ಷಣ, ನೀರು/ಶುಚಿತ್ವ ಮತ್ತು ಮಹಿಳೆಯರು ಮತ್ತು ಮಕ್ಕಳ ರಕ್ಷಣೆಯನ್ನು ಮೇಲ್ವಿಚಾರಣೆ ಮಾಡಲು ನೆರೆಹೊರೆ ಸಮಿತಿಗಳು ಮತ್ತು ಗುಂಪು ಮುಖಂಡರ ಸಮನ್ವಯ ಸ್ಥಾಪಿಸುವುದು ಮತ್ತು ಸುಗಮಗೊಳಿಸುವುದು.<br>❋ ಪ್ರತಿ ವಾರ್ಡ್‌ಗಳಲ್ಲಿ ಸಾಮಾಜಿಕ ಆರ್ಥಿಕ ತೊಂದರೆಗಳು ಮತ್ತು ಅವಶ್ಯಕತೆಗಳು ಗುರುತಿಸಲು ಕಿರುಯೋಜನೆ ಜಾರಿಗೊಳಿಸುವುದು.<br>❋ ನಗರದಲ್ಲಿರುವ ಬಿಪಿಎಲ್ ಕುಟುಂಬಗಳಿಗೆ ಸೌಲಭ್ಯಗಳನ್ನು ಒದಗಿಸುವುದು.<br>❋ ಮಕ್ಕಳ ಹಕ್ಕುಗಳು ಮತ್ತು ಲಿಂಗತ್ವ ವಿಚಾರಗಳ ಕುರಿತು ವಾರ್ಡ್‌ಗಳಲ್ಲಿ ವಿಶೇಷ ಕೆಲಸ ಮಾಡುವ ನಿಟ್ಟಿನಲ್ಲಿ ಎಲ್ಲ |



| ಯಾರು | ಏನು |
|---|---|
| | ಜನಪ್ರತಿನಿಧಿಗಳು, ಮಹಿಳಾ ಸಂಘಗಳು, ವಾರ್ಡ್ ಸದಸ್ಯರಿಗೆ ತರಬೇತಿ ಮತ್ತು ಸಹಸ್ಪಂದನಾ ಕಾರ್ಯಕ್ರಮಗಳನ್ನು ಆಯೋಜಿಸುವುದು.<br>• ನಗರಪಾಲಿಕೆಯನ್ನು ಬಾಲಕಾರ್ಮಿಕ ಮುಕ್ತ ನಗರವನ್ನಾಗಿ ಮಾಡಲು ಎಲ್ಲಾ ಯೋಜನೆ ಮತ್ತು ಕ್ರಮಗಳನ್ನು ತಯಾರಿಸಿ ಅನುಷ್ಠಾನಕ್ಕೆ ತರುವಲ್ಲಿ ಡಿ.ಪಿ.ಪಿ.ಯ ಪ್ರಯೋಜನ ಪಡೆಯುವುದು.<br>• ನಗರಪಾಲಿಕೆ ಸಿಬ್ಬಂದಿ, ಜನಪ್ರತಿನಿಧಿಗಳು ಮತ್ತು ಪೌರ ಕಾರ್ಮಿಕರಿಗೆ ಮಕ್ಕಳ ಹಕ್ಕು, ಬಾಲಕಾರ್ಮಿಕ ಪದ್ಧತಿ ಮತ್ತು ಮಕ್ಕಳ ಸಂರಕ್ಷಣೆ ವಿಚಾರ ಕುರಿತು ನಿರಂತರವಾಗಿ ವಿವಿಧ ತರಬೇತಿಗಳನ್ನು ನೀಡುವುದು.<br>• ಮಕ್ಕಳ ಸಂರಕ್ಷಣೆ ಕುರಿತಾದ ಜಾಗೃತಿ ಸಾಹಿತ್ಯಗಳು ಮತ್ತು ವಿವಿಧ ಕಾರ್ಯಕ್ರಮಗಳ ಮೂಲಕ ನಗರಸಭೆ ವ್ಯಾಪ್ತಿಯಲ್ಲಿ ಮಕ್ಕಳ ಸಂರಕ್ಷಣೆ ಕುರಿತಾದ ನಿರಂತರವಾದ ಜಾಗೃತಿ ಹಾಗೂ ಮಕ್ಕಳ ಉಲ್ಲಂಘನೆ ಸಂದರ್ಭಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು. |
| ಯುನಿಸೆಫ್ | • ಜಿಲ್ಲೆ ಮತ್ತು ರಾಜ್ಯದಲ್ಲಿ ಡಿಪಿಪಿಯನ್ನು ಅಂತರ–ಕ್ಷೇತ್ರೀಯ ಮಟ್ಟದಲ್ಲಿ ಸಂಯೋಜಿಸುವುದು. ವಿವಿಧ ಭಾಗೀದಾರರ ನಡುವೆ ಚರ್ಚೆ ನಡೆಸುವುದು, ಡಿಪಿಪಿಯ ಜಾರಿ ಮತ್ತು ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು.<br>• ಡಿಪಿಪಿಯ ಪರಿಣಾಮ, ಪ್ರಗತಿಯನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಪರಿಶೀಲನೆ ಮಾಡಲು ನೆರವಾಗುವುದು ಮತ್ತು ಮಕ್ಕಳ ಅಭ್ಯುದಯಕ್ಕಾಗಿ ಆಗಿರುವಂತಹ ಒಳ್ಳೆಯ ಪರಿಣಾಮಗಳು ಮತ್ತು ಬದಲಾವಣೆಯನ್ನು ವರದಿ ಮಾಡುವುದು.<br>• ಅಪಾಯದ ಅಂಚಿನಲ್ಲಿರುವ ಮಕ್ಕಳು ಮತ್ತು ಮಹಿಳೆಯರ ಸಮಸ್ಯೆಗಳು ಆಲಿಸಲು ಸಮುದಾಯದ ನೆರವಿನೊಂದಿಗೆ ವೇದಿಕೆಗಳನ್ನು ಒದಗಿಸುವುದು. |






| ಯಾರು | ಏನು |
| --- | --- |
| | ✹ ಜಿಲ್ಲಾಮಟ್ಟದ ಅಧಿಕಾರಿಗಳು, ಎನ್‌ಜಿಓ ಒಕ್ಕೂಟಗಳು, ಇತರೆ ಭಾಗೀದಾರರು ಮತ್ತು ಸಮಿತಿಗಳು ಇವರೊಂದಿಗೆ ಸೇರಿ ಬೆಂಬಲ ನೀಡುವುದು.<br>✹ ಮಧ್ಯಂತರ ಮತ್ತು ಅಂತಿಮ ಮೌಲ್ಯಮಾಪನದಲ್ಲಿ ಭಾಗವಹಿಸುವುದು.<br>✹ ಎನ್‌ಜಿಓ ಒಕ್ಕೂಟಗಳ ಸಂಯೋಜನೆಗೆ ಬೆಂಬಲ ನೀಡುವುದು.<br>✹ ಯೋಜನಾ ಪ್ರಕ್ರಿಯೆಗಳು / ಪ್ರಗತಿ ಮತ್ತು ಉತ್ತಮ ಕಲಿಕೆಯನ್ನು ದಾಖಲಿಸುವುದು. |
| ಸ್ವಯಂಸೇವಾ ಸಂಸ್ಥೆಗಳು | ✹ಬಾಲಕಾರ್ಮಿಕ ಪದ್ಧತಿಯ ಘಟನೆಗಳ ಕುರಿತು ಸಮುದಾಯ ಆಧಾರಿತ ನಿಗಾ ಇಟ್ಟುಕೊಂಡು ತನ್ಮೂಲಕ ಸಮುದಾಯದ ಸಹಭಾಗಿತ್ವವನ್ನು ಕಾಪಾಡುವುದು.<br>✹ಕ್ಷೇತ್ರಾನುಭವಗಳನ್ನು ಆಧರಿಸಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಮುಖ್ಯ ವಿಚಾರಗಳನ್ನು ಮುಂದಿಡುವುದು.<br>✹ಮಕ್ಕಳ ರಕ್ಷಣೆಯಲ್ಲಿ ಮಾದರಿಯಾಗಬಹುದಾದ ಕಿರು ಪ್ರಯೋಗಗಳನ್ನು ರೂಪಿಸಿ, ಜಾರಿಗೆ ತರುವುದು.<br>✹ಸಮುದಾಯ ಗುಂಪುಗಳು, ಸ್ವಯಂಸೇವಕ ಶಿಕ್ಷಕರು ಮತ್ತು ಇತರರಿಗೆ ಬಾಲಕಾರ್ಮಿಕ ಪದ್ಧತಿ ಕುರಿತು ತರಬೇತಿ ನೀಡುವುದು.<br>✹ಸೇತುಬಂಧ ಶಾಲೆಗಳನ್ನು ಪ್ರಾರಂಭಿಸಿ ನಡೆಸುವುದು.<br>✹ಹಾಜರಾತಿ ಖಾತ್ರಿಪಡಿಸಲು ಶಾಲೆ ಮತ್ತು ವಿದ್ಯಾರ್ಥಿನಿಲಯಗಳಲ್ಲಿನ ಮಕ್ಕಳ ಅನುಸರಣೆ ಮಾಡುವುದು.<br>✹ಇಲಾಖೆಗಳ ಸಂಯೋಜನೆಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳಿಗೆ ಮತ್ತು ಶಾಲಾ ಸಬಲೀಕರಣ ಪ್ರಕ್ರಿಯೆಗಳಿಗೆ ಬೆಂಬಲ ನೀಡುವುದು. |



| ಯಾರು | ಏನು |
|---|---|
| | ✸ಮಕ್ಕಳು ಮತ್ತು ಮಹಿಳೆಯರ ರಕ್ಷಣೆ ವಿಚಾರಗಳ ಕುರಿತು ಸಂಸ್ಥೆಗಳ ಸಿಬ್ಬಂದಿಯ ಸಾಮರ್ಥ್ಯ ಹೆಚ್ಚಿಸುವುದು.<br>✸ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಮುದಾಯ ಸದಸ್ಯರು ಮತ್ತು ಸ್ವಯಂ ಸೇವಾ ಸಂಸ್ಥೆಗಳ ನಡುವಿನ ಚರ್ಚೆ ಮತ್ತು ಸಂಯೋಜನೆ ಸುಗಮ ಮಾಡುವುದು.<br>✸ಡಿಪಿಪಿಯ ಪ್ರಗತಿ ಮತ್ತು ಸಂಬಂಧಿಸಿದ ಕೆಲಸಗಳಲ್ಲಿ ಸಹಭಾಗಿತ್ವ.<br>✸ಕಾರ್ಯಕ್ರಮ ಅನುಷ್ಠಾನ ಕುರಿತ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವುದು.<br>✸ಡಿಪಿಪಿಯ ಜಾರಿಯಲ್ಲಿ ಮಕ್ಕಳು, ಯುವಜನರು ಮತ್ತು ಮಹಿಳೆಯರ ಭಾಗವಹಿಸುವಿಕೆ ಸುಗಮ ಮಾಡುವುದು ಮತ್ತು ಯೋಜನೆ ಕುರಿತು ಅವರ ಅನಿಸಿಕೆಗಳನ್ನು ಹಂಚಿಕೊಳ್ಳುವುದು. |





# ಅನುಬಂಧ – 1

## ಭಾರತ ಸರ್ಕಾರ ಯುನಿಸೆಫ್‌ನೊಂದಿಗೆ ಸೇರಿ ತಯಾರಿಸಿದ ಅಭಿವೃದ್ಧಿ ಗ್ರಾಮ ಯೋಜನೆಯ – 15 ಸೂಚ್ಯಂಕಗಳು

### ಆರೋಗ್ಯ

- ಎಲ್ಲ ಜನನಗಳೂ 21 ದಿನಗಳೊಳಗೆ ನೊಂದಾಯಿಸಲ್ಪಡುವುದು ಮತ್ತು ಜನನ ಪ್ರಮಾಣ ಪತ್ರ ಪಡೆಯುವುದು
- ಎಲ್ಲ ಹೆರಿಗೆಗಳಲ್ಲೂ ಒಬ್ಬ ತಜ್ಞ ವ್ಯಕ್ತಿಯ ಭಾಗವಹಿಸುವಿಕೆ ಖಾತರಿಪಡಿಸುವುದು.
- ಎಲ್ಲ ಮಕ್ಕಳೂ ಕನಿಷ್ಠ 6 ತಿಂಗಳು ಎದೆಹಾಲು ಕುಡಿಯುವಂತೆ ನೋಡಿಕೊಳ್ಳುವುದು.
- ಶೇ. 90ರಷ್ಟು ಮಕ್ಕಳು ಪ್ರತಿಬಂಧ ಚುಚುಮದ್ದು ಹಾಕಿಸಿಕೊಳ್ಳುವುದು
- ಬೇದಿಗೊಳಗಾದ ಶೇ. 90ರಷ್ಟು ಮಕ್ಕಳು ಓಆರ್‌ಎಸ್ ಬಳಸಿಕೊಳ್ಳುವುದು ಮತ್ತು ಮಕ್ಕಳಿಗೆ ತೀವ್ರ ಉಸಿರಾಟ ತೊಂದರೆಗೆ ಸೂಕ್ತವಾದ ಚಿಕಿತ್ಸೆ ನೀಡುವುದು.

### ಪೌಷ್ಠಿಕಾಹಾರ

- ಎಲ್ಲ ಮಕ್ಕಳೂ ಸಾಕಷ್ಟು 'ವಿಟಮಿನ್ ಎ' ಉಪಯೋಗಿಸುವುದು
- 5 ವರ್ಷದೊಳಗಿನ ಮಕ್ಕಳು ಪೌಷ್ಠಿಕಾಹಾರ ಕೊರತೆಯಿಂದ ನರಳದಂತೆ ನೋಡಿಕೊಳ್ಳುವುದು.
- ಎಲ್ಲ ಮನೆಗಳಲ್ಲೂ ಅಯೊಡಿನ್ ಮಿಶ್ರಿತ ಉಪ್ಪು ಬಳಸುವುದು



## ಶಿಕ್ಷಣ

☛ ಎಲ್ಲ ಮಕ್ಕಳೂ ಕಲಿಕಾ ಸಾಮರ್ಥ್ಯದೊಂದಿಗೆ ಕಿರಿಯ ಪ್ರಾಥಮಿಕ ಶಾಲೆ ಪೂರ್ಣಗೊಳಿಸುವುದು (ಹೆಣ್ಣು ಮಕ್ಕಳಿಗೆ ಆದ್ಯತೆ)

## ಹೆಚ್ ಐ ವಿ / ಏಡ್ಸ್

☛ 15–24 ವರ್ಷದೊಳಗಿನ ಎಲ್ಲ ಯುವಜನರೂ ಖಚಿತ ಮಾಹಿತಿ ಪಡೆಯುವುದು ಮತ್ತು ಸುರಕ್ಷಿತವಾದ ನಡವಳಿಕೆಯನ್ನು ಪಾಲಿಸುವುದು

## ಮಕ್ಕಳ ರಕ್ಷಣೆ

☛ 18 ವರ್ಷದೊಳಗಿನ ಹೆಣ್ಣು ಮಕ್ಕಳ, 21 ವರ್ಷದೊಳಗಿನ ಗಂಡು ಮಕ್ಕಳ ವಿವಾಹಗಳ (ಬಾಲ್ಯ ವಿವಾಹ) ಸಂಖ್ಯೆ ಶೇ. 50ಕ್ಕೆ ಇಳಿಯುವುದು.

☛ ತಮ್ಮ ಬೆಳವಣಿಗೆಗೆ ಕುಂಠಿತವಾಗುವ, ಅಪಾಯಕಾರಿ / ಶೋಷಿತ ಕ್ಷೇತ್ರದಲ್ಲಿ ಮಕ್ಕಳು ದುಡಿಯದೇ ಇರುವುದು, 10ನೇ ತರಗತಿಯತನಕ ಎಲ್ಲ ಮಕ್ಕಳು ಶಾಲೆಯಲ್ಲಿರುವಂತೆ ಖಾತ್ರಿ ಪಡಿಸುವುದು.

## ಮಗುವಿನ ಪರಿಸರ

☛ ಎಲ್ಲ ಮನೆಗಳಿಗೂ ನೀರಿನ ಆಧುನಿಕ ಮೂಲಗಳ ಲಭ್ಯತೆ (ಹ್ಯಾಂಡ್ ಪಂಪ್ 4 ದಿನದೊಳಗೆ ರಿಪೇರಿ ಮಾಡಿಸುವುದು ಸೇರಿದಂತೆ)

☛ ಎಲ್ಲ ಮನೆಗಳಲ್ಲೂ ಪರ್ಯಾಪ್ತ ಶುಚಿತ್ವ ಸೌಕರ್ಯಗಳ ಲಭ್ಯತೆ


☛ ಕುಟುಂಬದ ಎಲ್ಲ ಸದಸ್ಯರೂ ಊಟದ ಮೊದಲೇ ಮತ್ತು ವಿಸರ್ಜನೆ ನಂತರ ಸೋಪು ನೀರಿನಲ್ಲಿ ಕೈ ತೊಳೆಯುವುದು.



# Abbreviations

| | | |
|---|---|---|
| AIDS | Acquired Immunodeficiency Syndrome | ಏಡ್ಸ್ |
| ANMs | Auxiliary Nurse Midwifery | ಆರೋಗ್ಯ ಕಾರ್ಯಕರ್ತೆಯರು |
| ATC | Anti Trafficking Committee | ಸಾಗಾಣಿಕಾ ವಿರೋಧಿ ಸಮಿತಿ. |
| BPL | Below Poverty Line | ಬಡತನ ರೇಖೆಗಿಂತ ಕೆಳಗಿರುವ |
| BRC | Block Resource Centre | ತರಬೇತಿ ಕ್ಷೇತ್ರ ಸಂಪನ್ಮೂಲ ಕೇಂದ್ರ |
| CBO's | Community Based Organizations | ಸಮುದಾಯ ಆಧಾರಿತ ಸಂಸ್ಥೆಗಳು |
| CEO | Chief Executive Officer | ಮುಖ್ಯ ಕಾರ್ಯನಿರ್ವಹಣಾಧಿಕಾರಿ |
| CRC | Convention on the Rights of the Child | ಮಕ್ಕಳ ಹಕ್ಕುಗಳ ಒಡಂಬಡಿಕೆ |
| CRC | Cluster Resource Centre | ಸಮೂಹ ಸಂಪನ್ಮೂಲ ಕೇಂದ್ರ |
| CWC | Child Welfare Committee | ಮಕ್ಕಳ ಕಲ್ಯಾಣ ಸಮಿತಿ |
| DC | Deputy Commissioner | ಜಿಲ್ಲಾಧಿಕಾರಿಗಳು |
| DCPU | District Child Protection Unit | ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ |
| DPP | District Protection Plan | ಜಿಲ್ಲಾ ಸಂರಕ್ಷಣಾ ಯೋಜನೆ |
| DSERT | Directorate of State Education, Research & Training | ರಾಜ್ಯ ಶಿಕ್ಷಣ, ಸಂಶೋಧನಾ ಮತ್ತು ತರಬೇತಿ ನಿರ್ದೇಶನಾಲಯ |
| ECCE | Early Childhood Care and Education | ಪ್ರಾಥಮಿಕ ಪೂರ್ವ ಪಾಲನೆ ಮತ್ತು ಶಿಕ್ಷಣ |
| FIR | First Information Report | ಪ್ರಥಮ ಮಾಹಿತಿ ವರದಿ |
| HIV | Human Immunodeficiency Virus | ಹ್ಯೂಮನ್ ಇಮ್ಯುನೋಡೆಫಿಶಿಯೆನ್ಸಿ ವೈರಸ್ |
| ICPS | Integrated Child Protection Scheme | ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆ |





| | | |
|---|---|---|
| IEC | Information, Education and Communication | ಮಾಹಿತಿ, ಶಿಕ್ಷಣ ಮತ್ತು ಸಂವಹನ |
| IFA | Iron & Folic Acid | ಕಬ್ಬಿಣಾಂಶದ ಮಾತ್ರೆ |
| IMR | Infant Mortality Rate | ಶಿಶು ಮರಣ ಪ್ರಮಾಣ |
| JJACT | Juvenile Justice (Care & Protections) Amendment Act-2006 | ಮಕ್ಕಳ ನ್ಯಾಯ (ಪೋಷಣೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ–2006 |
| JJB | Juvenile Justice Board | ಮಕ್ಕಳ ನ್ಯಾಯ ಮಂಡಳಿ |
| KDP | Karnataka Development Program | ಕರ್ನಾಟಕ ಅಭಿವೃದ್ಧಿ ಯೋಜನೆಗಳು |
| MIS | Multiple Information System | ಮಾಹಿತಿ ನಿರ್ವಹಣೆ ವ್ಯವಸ್ಥೆ |
| NCLP | National Child Labour Project | ರಾಷ್ಟ್ರೀಯ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರೀಯಾ ಯೋಜನೆ |
| NGO's | Non Government Organizations | ಸ್ವಯಂಸೇವಾ ಸಂಸ್ಥೆಗಳು |
| ORS | Oral Rehidration Solution | ಜೀವಜಲ |
| RCH | Reproductive and Child Health | ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ |
| SCLP | State Child Labour Project | ರಾಜ್ಯ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರೀಯಾ ಯೋಜನೆ. |
| SDMC | School Development and Monitoring Committee | ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ |
| SJPU | Special Juvenile Police Unit | ಮಕ್ಕಳ ವಿಶೇಷ ಪೊಲೀಸ್ ಘಟಕ |
| SSA | Sarva Shikshana Abhiyana | ಸರ್ವ ಶಿಕ್ಷಣ ಅಭಿಯಾನ |
| SP | Superintendent of Police | ಪೊಲೀಸ್ ವರಿಷ್ಠಾಧಿಕಾರಿಗಳು |
| ToT | Training of Trainees | ತರಬೇತಿದಾರರ ತರಬೇತಿ |
| UNICEF | United Nations Children Fund | ವಿಶ್ವಸಂಸ್ಥೆಯ ಮಕ್ಕಳ ನಿಧಿ |



1989, ನವೆಂಬರ್ 20
ರಂದು ವಿಶ್ವಸಂಸ್ಥೆ
ಅಂಗೀಕಾರ ಮಾಡಿ
ಜಾರಿಗೆ ತಂದ ಹಾಗೂ
ಡಿಸೆಂಬರ್ 11, 1992
ರಂದು ಭಾರತ ಸಹಿ
ಮಾಡಿ ಒಪ್ಪಿದಂತೆ
"ಮಕ್ಕಳ ಹಕ್ಕುಗಳ
ಒಡಂಬಡಿಕೆ"ಯ
ಸಮಾವೇಶದ ಪ್ರಕಾರ
ದೇಶದ ಪ್ರತಿಯೊಂದು
ಮಗುವಿಗೂ ಎಲ್ಲಾ
ಹಕ್ಕುಗಳಿವೆ.





**Unicef Child Protection Project**
O/o Deputy Commissioner,
Between A.C. Office & Family Court,
Sathkacheri, Raichur - 584 101.
Ph. : 08532-230610, 229011
E-mail : unicefdcdppr@gmail.com

**United Nations Children's Fund**
H. No. 3-6-15/2, M. No. 865,
Street No. 19, Himayathnagar,
Hyderabad - 500 029.
Ph. : 23227226, 23227236